ತುಳ್ಳಲ್ ಕವಿ ಕುಂಜನ್ ನಂಬಿಯಾರ್

ಬಿ. ಕೆ. ತಿಮ್ಮಪ್ಪ
ಟಿ. ವೆಂಕಟಲಕ್ಷ್ಮಿ

ಬೆಂಗಳೂರು ವಿಶ್ವವಿದ್ಯಾಲಯ
ಬೆಂಗಳೂರು

33

ತುಳ್ಳಲ್‌ಕವಿ ಕುಂಜನ್ ನಂಬಿಯಾರ್

ಬಿ. ಕೆ. ತಿಮ್ಮಪ್ಪ
ಟಿ. ವೆಂಕಟಲಕ್ಷ್ಮಿ

ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು

TULLALKAVI KUNJAN NAMBIYAR
by Sri B. K. Thimmappa & Smt T. Vekatalakshmi.
Published by the Bangalore University, Bangalore

ಪ್ರಧಾನ ಸಂಪಾದಕರು : ಡಾ॥ ಜಿ. ಎಸ್. ಶಿವರುದ್ರಪ್ಪ

ಪ್ರಕಾಶಕರು :
ಕೆ. ಸಿ. ಶಿವಪ್ಪ
ಉಪ-ನಿರ್ದೇಶಕ
ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ
ಬೆಂಗಳೂರು ವಿಶ್ವವಿದ್ಯಾಲಯ
'ಜ್ಞಾನಭಾರತಿ', ಬೆಂಗಳೂರು-560056

ಬೆಲೆ : 25 ಪೈಸೆ

ಮುದ್ರಣ :
ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ

ಮುನ್ನುಡಿ

ವಿಶ್ವವಿದ್ಯಾಲಯಗಳು ಕೇವಲ ತಿಳುವಳಿಕೆಯ ಕೇಂದ್ರ ಗಳಾದರೆ ಸಾಲದು. ಅವು ಸುತ್ತಮುತ್ತಲಿನ ಜನತೆಯ ಶೈಕ್ಷಣಿಕ-ಸಾಂಸ್ಕೃತಿಕ ಆಗುಹೋಗುಗಳಲ್ಲಿ ಸಹ ಸಕ್ರಿಯವಾಗಿ ಪಾಲ್ಗೊಳ್ಳುವುದು ಆವಶ್ಯಕ. ಪಾಠ ಪ್ರವಚನ, ಉನ್ನತ ವ್ಯಾಸಂಗ ಮತ್ತು ಸಂಶೋಧನೆಗಳಿಗೆ ಮಾತ್ರ ವಿಶ್ವವಿದ್ಯಾಲಯ ಗಳ ಕಾರ್ಯವ್ಯಾಪ್ತಿ ಸೀಮಿತವಾಗಿರಬಾರದು. ಸಾಮಾನ್ಯ ಜನತೆಯಲ್ಲಿ ಅರಿವಿನ ಸಿರಿಯನ್ನು ಹಂಚುವ ಹೊಣೆ ಹೊತ್ತು ವಿಶ್ವವಿದ್ಯಾಲಯಗಳು ಜ್ಞಾನ ಪ್ರಸಾರ ಕೇಂದ್ರಗಳಾಗಿ ಮುನ್ನಡೆಯಬೇಕು.

ಬೆಂಗಳೂರು ವಿಶ್ವವಿದ್ಯಾಲಯವು ಕಳೆದ ನಾಲ್ಕೈದು ವರ್ಷಗಳಿಂದ ನಗರದ ನಾನಾ ಸಂಘ ಸಂಸ್ಥೆಗಳಲ್ಲಿ, ಕಾರ್ಖಾನೆ ಕಾರ್ಮಿಕ ಕೂಟಗಳಲ್ಲಿ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸುತ್ತ ಬಂದಿದೆ. ಆಯಾ ವಿಷಯಗಳಲ್ಲಿ ಪರಿಣತರಾದವರು ಭಾಷಣಗಳನ್ನು ನೀಡಿ,ಅನಂತರ ಅವುಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲು ನಮ್ಮೊಡನೆ ಸಹಕರಿಸುತ್ತಿರುವುದು ಸಂತಸದ ಸಂಗತಿ. ಅತ್ಯಧಿಕ ಸಂಖ್ಯೆಯಲ್ಲಿ ನಮ್ಮ ಜನತೆಯ ಕೈಸೇರಲೆಂದು ಈ ಕಿರುಹೊತ್ತಿಗೆಗಳನ್ನು ಸುಲಭ ಬೆಲೆಯಲ್ಲಿ ಪ್ರಕಟಿಸುತ್ತಿದ್ದೇವೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಶ್ರೀಮಂತಿಕೆಯನ್ನು ಹೆಚ್ಚಿಸಿ, ಜನಸಾಮಾನ್ಯರ ತಿಳಿವನ್ನು ಉತ್ತಮಗೊಳಿಸುವ ದಿಸೆಯಲ್ಲಿ ಈ ಹೊತ್ತಿಗೆಗಳು ಸಹಕಾರಿಯಾಗಲೆಂದು ನಾನು ಮನಸಾರೆ ಹಾರೈಸುತ್ತೇನೆ.

ಎಚ್. ನರಸಿಂಹಯ್ಯ

ಉಪಕುಲಪತಿ

ಬೆಂಗಳೂರು ವಿಶ್ವವಿದ್ಯಾಲಯ

ಅರಿಕೆ

ಮಲೆಯಾಳ ಸಾಹಿತ್ಯದಲ್ಲಿ ಎಲ್ಲ ದೃಷ್ಟಿಯಿಂದಲೂ ಒಂದು ಹೊಸ ತಿರುವು ಕುಂಜನ್ ನಂಬಿಯಾರರ ತುಳ್ಳಲ್‌ಕಾವ್ಯಗಳ ರಚನೆಯಿಂದ ಪ್ರಾರಂಭವಾಯಿತೆಂದು ಹೇಳಬಹುದು. ಸಂಸ್ಕೃತ ವೃತ್ತಗಳನ್ನಾಗಲೀ ಕಥಕಳಿಯ ಗಾನರೀತಿಯನ್ನಾಗಲೀ ಅನುಕರಿಸದೆ ಶುದ್ಧ ಮಲಯಾಳ ಶೈಲಿಯಲ್ಲಿ ತುಳ್ಳಲ್ ಕಾವ್ಯ ರಚನೆಯನ್ನು ಪ್ರಾರಂಭಿಸಿದುದೇ ನಂಬಿಯಾರರ ಈ ಹೊಸ ಹಾದಿಯ ಉದ್ದೇಶ. ಈ ಕವಿಯ ಮುಖ್ಯ ದೃಷ್ಟಿ, ಕಾವ್ಯ, ಜನಸಾಮಾನ್ಯರಿಗೂ ಅರ್ಥವಾಗುವಂತಿರಬೇಕು ಎನ್ನುವುದಾಗಿತ್ತು. ಪೌರಾಣಿಕ ಕಥೆಗಳ ಚೌಕಟ್ಟಿನಲ್ಲಿ ಕೇರಳದ ಸಂಸ್ಕೃತಿ, ಜನಜೀವನ, ಸಮಾಜದ ಆಚಾರ ವಿಚಾರಗಳು ಮುಂತಾದುವುಗಳನ್ನೆಲ್ಲ ವರ್ಣಿಸುವಾಗ ಅವುಗಳ ದೋಷಗಳನ್ನೂ ವಿಕೃತಿಗಳನ್ನೂ ಸೂಕ್ಷ್ಮವಾಗಿ ಗಮನಿಸಿ, ವಿಡಂಬನೆಯ ಮೂಲಕ ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ಈ ಕವಿಗಿತ್ತು. ಕೇರಳೀಯ ಜನಜೀವನದ ಯಾವುದೇ ವಿಭಾಗ ನಂಬಿಯಾರರ ಪರಿಹಾಸ ಪ್ರಯೋಗಕ್ಕೊಳಗಾಗದೆ ಕೈಬಿಟ್ಟು ಹೋಗಿದೆ ಎಂದು ಹೇಳುವಂತಿಲ್ಲ.

ಈ ಚಿಕ್ಕ ಕೃತಿಯಲ್ಲಿ ಮಲಯಾಳ ಮಹಾಕವಿ ಕುಂಜನ್ ನಂಬಿಯಾರರ ಕೃತಿಗಳ ಸಮಗ್ರ ಪರಿಚಯವನ್ನು ಮಾಡಿಕೊಡಲು ಸಾಧ್ಯವಾಗದಿದ್ದರೂ ಸಂಕ್ಷಿಪ್ತವಾಗಿ ಈ ಕವಿಯ ಉದ್ದೇಶ ಮತ್ತು ಸಾಧನೆಗಳನ್ನು ತಿಳಿಸಲು ನಮ್ಮ ಶಕ್ತಿಮೀರಿ ಪ್ರಯತ್ನಿಸಿದ್ದೇವೆ. ಈ ಕಿರುಹೊತ್ತಗೆಯನ್ನು ಬೆಂಗಳೂರು

ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆಯಲ್ಲಿ ಪ್ರಕಟಿಸಿ ನಮ್ಮನ್ನು ಪ್ರೋತ್ಸಾಹಿಸಿದ ನಮ್ಮ ಪೂಜ್ಯ ಗುರುಗಳಾದ ಡಾ॥ ಜಿ. ಎಸ್. ಶಿವರುದ್ರಪ್ಪನವರಿಗೂ, ಪ್ರಚಾರೋಪನ್ಯಾಸ ಮಾಲೆಯ ಸಂಪಾದಕ ಮಂಡಲಿಗೂ ನಾವು ಕೃತಜ್ಞರಾಗಿದ್ದೇವೆ.

ಕಾಸರಗೋಡು
6–6–1974

ಬಿ. ಕೆ. ತಿಮ್ಮಪ್ಪ
ಟಿ. ವೆಂಕಟಲಕ್ಷ್ಮಿ

ಪರಿವಿಡಿ

ಹಿನ್ನೆಲೆ

ಕ್ರಿ. ಶ. 1673 ರಲ್ಲಿ ಗೀತಗೋವಿಂದವ ಆಧಾರದ ಮೇಲೆ ರಚಿತವಾದ 'ಕೃಷ್ಣನಾಟ್ಟ' ಕಥಕಳಿ ಸಾಹಿತ್ಯ, ಮಲಯಾಳ ಸಾಹಿತ್ಯಕ್ಷೇತ್ರದಲ್ಲಿ ಒಂದು ಹೊಸಹಾದಿಯನ್ನು ನಿರ್ಮಿಸಿತು. 'ಕೃಷ್ಣನಾಟ್ಟ'ದ ಅನಂತರ 'ರಾಮನಾಟ್ಟ' ಮುಂತಾದ ಆಟ್ಟ ಕಥಾ ಪ್ರಕಾರಗಳು ಸೃಷ್ಟಿಗೊಂಡುವು. ಮಲಯಾಳದಲ್ಲಿ 'ಕಳಿ' ಎಂದರೆ ಅಭಿನಯ, ಆಟ, ನೃತ್ಯ. 'ಕಳಿ'ಯ ಮೂಲಕ ಗೀತಾತ್ಮಕವಾದ ಪೌರಾಣಿಕ ಕಥೆಯನ್ನು ನಿರೂಪಿಸುವುದೇ 'ಕಥಕಳಿ'. ಹೆಚ್ಚುಕಡಿಮೆ ಇದೇ ಕಾಲದಲ್ಲಿ 'ಚಾಕ್ಯಾರ್‌ಕೂತ್ತು'* ಏಕಪಾತ್ರಾಭಿನಯದ ಮೂಲಕ ಸಂಸ್ಕೃತ ನಾಟಕಗಳನ್ನು ಮಲಯಾಳದಲ್ಲಿ ವ್ಯಾಖ್ಯಾನಿಸುತ್ತಾ ಪ್ರದರ್ಶಿಸುತ್ತಿದ್ದುದು ಬಳಕೆಯಲ್ಲಿತ್ತು. ಅನಂತರ 'ತುಳ್ಳಲ್'† ಸಾಹಿತ್ಯ ಸೃಷ್ಟಿಗೊಂಡದ್ದು. ತುಳ್ಳಲ್ ಸಾಹಿತ್ಯ ಕೇರಳೀಯರ ಹೃದಯವನ್ನು ಸೂರೆಗೊಂಡಂತೆ ಮತ್ತಾವ ಸಾಹಿತ್ಯಪ್ರಕಾರವೂ ಸೂರೆಗೊಂಡಿಲ್ಲವೆನ್ನಬಹುದು.

ವಿಪುಲವಾದ ತುಳ್ಳಲ್ ಸಾಹಿತ್ಯವನ್ನು ರಚಿಸಿ, ಕೇರಳಾದ್ಯಂತ ಪ್ರಚಾರಕ್ಕೆ ತಂದದ್ದು ಏಕಮೇವಾದ್ವಿತೀಯರಾದ ಕವಿಕುಂಜನ್

---

*ಕೇರಳದ ಒಂದು ಜಾತಿಯ ಹೆಸರು. ಅವರು ಅಭಿನಯಿಸುತ್ತಿದ್ದ ನಾಟಕ 'ಚಾಕ್ಯಾರ್ ಕೂತ್ತು'.

†ಏಕಪಾತ್ರಾಭಿನಯದ ಮೂಲಕ ಪೌರಾಣಿಕ ಕಥೆಗಳನ್ನು ಅಭಿನಯಿಸುವುದು

ನಂಬಿಯಾರ್. ಈ ಕವಿ ಮಲಯಾಳದ ವಿಶಿಷ್ಟಕವಿ
ಎನ್ನಿಸಿಕೊಳ್ಳಲು ಮತ್ತೊಂದು ಕಾರಣವಿದೆ. ತಮಿಳು,
ಮಲಯಾಳ ಮಿಶ್ರಶೈಲಿಯ ಮತ್ತು ಸಂಸ್ಕೃತ ಮಲಯಾಳ
ಮಿಶ್ರಶೈಲಿಯ ಕಾವ್ಯರಚನಾತಂತ್ರವನ್ನು ಬಳಸದೆ ಸಾಮಾನ್ಯ
ಮಲಯಾಳ ಭಾಷೆಯನ್ನೇ ಬಳಸಿ ತುಳ್ಳಲ್ ಕಾವ್ಯಗಳನ್ನು
ರಚಿಸಿದುದು.

ಕವಿ ಪರಿಚಯ

ಪಾಲಘಾಟ್ ಜಿಲ್ಲೆಯ ಲಕ್ಕಿಡಿ ಹತ್ತಿರದ "ಕಿಳ್ಳಿಕುರುಶಿ
ಮಂಗಲಂ" ಎನ್ನುವುದು ಕ್ರಿ. ಶ. 1705 ರಿಂದ 1770 ರ ವರೆಗೆ
ಜೀವಿಸಿದ್ದ ಕವಿ ಕುಂಜನ್ ನಂಬಿಯಾರರ ಜನ್ಮಸ್ಥಳ. ಇವರ
ನಿಜವಾದ ಹೆಸರು ಕುಂಜನ್ ನಂಬಿಯಾರ್ ಎಂದಾಗಿರಲಿಲ್ಲ
ವೆಂದೂ ರಾಮನ್ ಎನ್ನುವುದು ಇವರ ಹೆಸರಾಗಿತ್ತೆಂದೂ
ಒಂದು ಅಭಿಪ್ರಾಯವಾದರೆ, ರಾಮನ್ ಅಲ್ಲ ಕೃಷ್ಣನ್ ಎಂದು
ಮತ್ತೊಂದು ಅಭಿಪ್ರಾಯವಿದೆ. ಈ ಎರಡು ಅಭಿಪ್ರಾಯಗಳು
ಇಂದಿಗೂ ಉಳಿದಿದ್ದರೂ ಜನಪ್ರಿಯವಾಗಿರುವ ಹೆಸರು
ಕುಂಜನ್ ನಂಬಿಯಾರ್ ಎಂದೇ.

ಕುಂಜನ್ ನಂಬಿಯಾರರಿಗೆ ಉಚ್ಚ ಮಟ್ಟದ ಶಿಕ್ಷಣ ದೊರೆತದ್ದು
ಚಂಬಕಶೇರಿ ರಾಜ್ಯದ ಅಂಬಲಪ್ಪುಳವಲ್ಲಿ. ಇವರಿಗೆ ಉಣ್ಣಿ
ರವಿಕುರುಪ್ ಮತ್ತು ದ್ರೋಣಂಪಳ್ಳಿ ಆಚಾರ್ಯರ್ ಎಂಬ
ಇಬ್ಬರು ಗುರುಗಳಿದ್ದಂತೆ ತಿಳಿದುಬರುತ್ತದೆ.

ದ್ರೋಣಂಪಳ್ಳಿ ಆಚಾರ್ಯರು ತುಳುನಾಡಿನವರು. ಇವರು
ತುಳುನಾಡಿನಿಂದ ಕೇರಳಕ್ಕೆ ಹೋಗಿ ನೆಲೆಸಿದುದರ ಸಂಬಂಧವಾಗಿ

ಒಂದು ಕಥೆಯಿದೆ. ಶಸ್ತ್ರವಿದ್ಯಾಭ್ಯಾಸಕ್ಕಾಗಿ ಕೇರಳದಿಂದ ತುಳುನಾಡಿಗೆ ಬರುತ್ತಿದ್ದ ಯೋಧರಿಗ ಉಡುಪಿಗೆ ಸಮೀಪದಲ್ಲಿ ವಾಸವಾಗಿದ್ದ ದ್ರೋಣಾಚಾರ್ಯರ ವಂಶಜರಾದ ದ್ರೋಣಂಪಳ್ಳಿ ಆಚಾರ್ಯರು ಶಸ್ತ್ರವಿದ್ಯಾಗುರುಗಳಾಗಿದ್ದರು. ಒಮ್ಮೆ ಶಸ್ತ್ರಾಭ್ಯಾಸಕ್ಕಾಗಿ ಬಂದ ಒಂದು ಗುಂಪಿನಲ್ಲಿ ಒಬ್ಬ ಪಣಿಕ್ಕರನಿದ್ದ. ಅವನು ಶಸ್ತ್ರಾಭ್ಯಾಸದ ಕಡೆಗೆ ಗಮನ ಕೊಡದೆ ಇದ್ದರೂ ಗುರುಕುಲದ ಕೆಲಸಗಳನ್ನು ನಿಷ್ಠೆಯಿಂದ ಮಾಡಿಕೊಂಡು ಹೋಗುತ್ತಿದ್ದ. ಶಿಕ್ಷಣವನ್ನು ಮುಗಿಸಿದ ಯೋಧರು ಕೇರಳಕ್ಕೆ ಹಿಂದಿರುಗುವ ಕಾಲ ಸಮೀಪಿಸಿತು. ಆ ಸಮಯದಲ್ಲಿ ಏನನ್ನೂ ಕಲಿಯದೆ ದುಃಖಿತನಾಗಿ ಹಿಂದಿರುಗುತ್ತಿದ್ದ ಪಣಿಕ್ಕರನನ್ನು ಕಂಡು ಮರುಕಗೊಂಡ ಗುರುಪತ್ನಿ ಆಚಾರ್ಯರ ಆರಾಧನಾ ಮೂರ್ತಿಯಾದ ಭಗವತಿಯ ಪ್ರತಿಮೆಯನ್ನು ಕೊಟ್ಟು 'ಇದನ್ನು ಭಕ್ತಿಯಿಂದ ಆರಾಧಿಸು, ನಿನ್ನ ಬಯಕೆಗಳೆಲ್ಲವೂ ಕೈಗೂಡುತ್ತವೆ' ಎಂದು ಹೇಳಿ ಕಳುಹಿಸಿಕೊಟ್ಟರು. ಪಣಿಕ್ಕರ ಭಗವತಿಯ ಪ್ರತಿಮೆಯೊಂದಿಗೆ ಕೇರಳಕ್ಕೆ ಹಿಂದಿರುಗಿ ಮಾತ್ತೂರ್ ಎನ್ನುವಲ್ಲಿ ಆ ಮೂರ್ತಿಯನ್ನು ಪ್ರತಿಷ್ಠಾಪಿಸಿದ. ಮನೆಯಲ್ಲಿ ದೇವಿಯ ವಿಗ್ರಹವನ್ನು ಕಾಣದಾದ ಆಚಾರ್ಯರು ಪತ್ನಿಯಿಂದ ವಿಷಯವನ್ನು ತಿಳಿದು ಪಣಿಕ್ಕರನನ್ನು ಹುಡುಕಿಕೊಂಡು ಕೇರಳಕ್ಕೆ ಹೊರಟರು. ಅವರು ಚಂಬಕಶೇರಿ ರಾಜ್ಯವನ್ನು ತಲಪಿದಾಗ ಅಲ್ಲಿಯ ರಾಜನಿಗೆ ದ್ರೋಣಂಪಳ್ಳಿ ಆಚಾರ್ಯರು ಆಗಮಿಸಿರುವ ಸುದ್ದಿ ತಿಳಿದು ಅವರನ್ನು ಗೌರವಾದರಗಳಿಂದ ಬರಮಾಡಿಕೊಂಡು ಅವರ ಮನಸ್ಸನ್ನು ಒಲಿಸಿಕೊಂಡು ತನ್ನ ರಾಜ್ಯದಲ್ಲಿಯೇ ಉಳಿಸಿಕೊಂಡ. ದೇವಿಯ ಮೂರ್ತಿಯನ್ನು ಹಿಂದಕ್ಕೆ ತರಲು ಹೋದ ಆಚಾರ್ಯರು ಕೇರಳದಲ್ಲಿಯೇ ನೆಲೆಸುವಂತಾಯಿತು.

ಅವರ ವಂಶಸ್ಥರು ಇಂದಿಗೂ ಅಂಬಲಪ್ಪುಳದಲ್ಲಿದ್ದಾರೆಂದು ತಿಳಿದು ಬರುತ್ತದೆ.

ಹೀಗೆ ಕೇರಳಕ್ಕೆ ಬಂದು ನೆಲಸಿದ ದ್ರೋಣಂಪಳ್ಳಿ ಆಚಾರ್ಯ ರಿಂದಲೂ ಕುಂಜನ್ ನಂಬಿಯಾರರಿಗೆ ಸಂಸ್ಕೃತಾಧ್ಯಯನ ಮಾಡಲು ಸಹಾಯಕವಾಯಿತು.

ಕುಂಜನ್ ನಂಬಿಯಾರರು ಚೆಂಬಕಶ್ಶೇರಿ ರಾಜರ ಪ್ರೀತಿಗೆ ಪಾತ್ರರಾಗಿ ತಮ್ಮ ಪೂರ್ವಜರ ವೃತ್ತಿಯಂತೆ ಚಾಕ್ಯಾರ್‌ಕೂತ್ತಿಗೆ ಮಿಳಾವು* ನುಡಿಸುವ ಉದ್ಯೋಗವನ್ನು ಕೈಗೊಂಡಿದ್ದರು. ಒಂದು ದಿನ ಚಾಕ್ಯಾರ್‌ಕೂತ್ತಿಗೆ ಮಿಳಾವು ನುಡಿಸುತ್ತಿದ್ದಾಗ ಒಂದು ಘಟನೆ ನಡೆಯಿತು. ನಂಬಿಯಾರರು ಮಿಳಾವು ನುಡಿಸದೆ ತೂಕಡಿಸುತ್ತಿದ್ದುದರಿಂದಲೋ ಅಥವಾ ತಾಳಕ್ಕೆ ಸರಿಯಾಗಿ ಪಕ್ಕವಾದ್ಯವನ್ನು ನುಡಿಸದೆ ಇದ್ದುದರಿಂದಲೋ ನಂಬಿಯಾರರು ಚಾಕ್ಯಾರರ ಪರಿಹಾಸಕ್ಕೊಳಗಾದರು. ಪ್ರೇಕ್ಷಕರ ಎದುರಿನಲ್ಲಿ ಪರಿಹಾಸಕ್ಕೊಳಗಾದ ನಂಬಿಯಾರರು ಲಜ್ಜಿತರಾಗಿ ತಲೆತಗ್ಗಿಸು ವಂತಾಯಿತು. ಇದರಿಂದ ನಂಬಿಯಾರರು ಸಿಟ್ಟುಗೊಂಡು ; 'ದಕ್ಷನ ಮೇಲಿನ ಕೋಪಕ್ಕೆ ರುದ್ರ ತನ್ನ ಜಟೆಯನ್ನು ಅಪ್ಪಳಿಸಿದಾಗ ವೀರಭದ್ರ ಉದ್ಭವಿಸಿ ಬಂದಂತೆ' ಚಾಕ್ಯಾರರ ಮೇಲಿನ ಸಿಟ್ಟಿಗೆ ಅದೇ ರಾತ್ರಿ ಮನೆಗೆ ಹಿಂದಿರುಗಿ 'ಕಲ್ಯಾಣ ಸೌಗಂಧಿಕಾ' ಎನ್ನುವ ತುಳ್ಳಲ್ ಕಥೆಯನ್ನು ರಚಿಸಿದರು. ಮರುದಿನ ಚಾಕ್ಯಾರ್ ಕೂತ್ತು ನಡೆಯುತ್ತಿದ್ದ ಸ್ಥಳದಲ್ಲಿ ಚಾಕ್ಯಾರ್ ಕೂತ್ತಿಗೆ ಅಭಿಮುಖವಾಗಿ ತುಳ್ಳಲ್ ಕಥೆಯನ್ನು ಪ್ರದರ್ಶಿಸುವುದಕ್ಕಾರಂಭಿಸಿದರು. ಚಾಕ್ಯಾರ್ ಕೂತ್ತನ್ನು

*ಚಾಕ್ಯಾರ್ ಕೂತ್ತಿಗೆ ನುಡಿಸುವ ಪಕ್ಕವಾದ್ಯ

ನೋಡುತ್ತ ಕುಳಿತಿದ್ದ ಪ್ರೇಕ್ಷಕರು ನಂಬಿಯಾರರ ತುಳ್ಳಲ್ ಕಥಾ ನಿರೂಪಣೆಯನ್ನು ಆಸ್ವಾದಿಸಲು ಬಂದು ಕುಳಿತುಕೊಂಡರು. ಸಾಮಾನ್ಯ ಜನರಿಗೂ ಅರ್ಥವಾಗುವಂತಿದ್ದ ಮಲಯಾಳ ಭಾಷೆಯ ಕವಿತಾ ರಚನೆಯ ಸೊಗಸಿಗೂ ಅವರಲ್ಲಿ ಅಭಿವ್ಯಕ್ತವಾಗುತ್ತಿದ್ದ ಹಾಸ್ಯರಸಕ್ಕೂ ಮಾರುಹೋದ ಜನ ನಂಬಿಯಾರರ ತುಳ್ಳಲ್ ಕಥೆಯನ್ನು ಬಹುವಾಗಿ ಮೆಚ್ಚಿಕೊಂಡರು. ಅಂದಿನಿಂದ ಕುಂಜನ್ ನಂಬಿಯಾರರು ತಮ್ಮ ಆಯುಷ್ಯವಿಡೀ ನಿರಂತರವಾಗಿ ಸುಮಾರು ಅರವತ್ತು ಸಾವಿರ ಪಾದಗಳಿಗೂ ಮಿಕ್ಕ ತುಳ್ಳಲ್ ಕಥನ ಕಾವ್ಯಗಳನ್ನು ಸೃಷ್ಟಿಸಿ ಕೇರಳದ ಉದ್ದಗಲಕ್ಕೂ ಅವುಗಳನ್ನು ಏಕಪಾತ್ರಾಭಿನಯದ ಮೂಲಕ ಪ್ರದರ್ಶಿಸಿ ಪಂಡಿತ ಪಾಮರರೆಲ್ಲರ ಮೆಚ್ಚುಗೆಗೆ ಪಾತ್ರರಾದರು.

ಆ ಕಾಲದಲ್ಲಿ ತಿರುವಾಂಕೂರನ್ನಾಳುತ್ತಿದ್ದ ಮಾರ್ತಾಂಡ ವರ್ಮರು ಕೇರಳದ ಸಣ್ಣ ಸಣ್ಣ ರಾಜರನ್ನೆಲ್ಲ ಗೆದ್ದು ತಿರುವಾಂಕೂರು ಸಂಸ್ಥಾನಕ್ಕೆ ವಶಪಡಿಸಿಕೊಂಡ ನಂತರ ನಂಬಿಯಾರರನ್ನು ತಿರುವನಂತಪುರಕ್ಕೆ ಆಹ್ವಾನಿಸಿ ಆಶ್ರಯವನ್ನಿತ್ತರು. ನಂಬಿಯಾರರು ತಮ್ಮ ಅರವತ್ತೈದನೆಯ ವಯಸ್ಸಿನಲ್ಲಿ ತಮ್ಮ ಜನ್ಮ ಸ್ಥಳವನ್ನು ಸಂದರ್ಶಿಸುವುದಕ್ಕಾಗಿ ಬರುತ್ತಿದ್ದಾಗ ಹುಚ್ಚುನಾಯಿ ಕಡಿದುದರ ಪರಿಣಾಮವಾಗಿ ಇಹಲೋಕಯಾತ್ರೆಯನ್ನು ಮುಗಿಸಿದರು.

ಕುಂಜನ್ ನಂಬಿಯಾರರ ಇತರ ಗ್ರಂಥಗಳು

ಚಾಣಕ್ಯ ಸೂತ್ರಂ, ಭಗವತ್ ದೂತಂ, ಶಿವಪುರಾಣಂ, ಶ್ರೀಕೃಷ್ಣ ಚರಿತಂ, (ಮಣಿಪ್ರವಾಳಂ), ನಳಚರಿತಕ್ಕಿಳಿಪ್ಪಾಟ್ಟು,

ಶೀಲಾವತಿ ನಾಲು ವೃತ್ತಂ, ರುಕ್ಮಿಣೀ ಸ್ವಯಂವರಂ ಪತ್ತು ವೃತ್ತಂ, ಪಾರ್ವತಿ ಸ್ವಯಂವರಂ, ಭಾಗವತಂ ಇರ್‌ಪತುನಾಲು ವೃತ್ತಂ, ಏಕಾದಶಿ ಮಹಾತ್ಮ್ಯಂ, ಪಂಚತಂತ್ರಂ–ಇವಲ್ಲದೆ ಶ್ರೀ ಕುಮಾರೇಶ್ವರಿ ಸ್ತೋತ್ರಂ, ಕಿರಾತಂ ವಂಚಿಪ್ಪಾಟ್ಟು, ರಾಸಕ್ರೀಡಾ ನಾಲು ವೃತ್ತಂ, ಮದನಕೇತು ಚರಿತಂ (ಪ್ರಹಸನ), ರಾಘವೀಯಂ (ಸಂಸ್ಕೃತ ಕಾವ್ಯ), ಮುಕುಂದ ಶತಕಂ, ಶಿವಶತಕಂ, ಅಂಬರನದೀಶ ಸ್ತೋತ್ರಂ, ಪಂಚಪದಿ, ಭಾಗವತ ಚಂಪು, ಸೀತಾ ರಾಘವಂ, ಪ್ರಾಕೃತ ಪ್ರಕಾಶವೃತ್ತಿ, ಶ್ರೀಕೃಷ್ಣ ವಿಲಾಸ ವ್ಯಾಖ್ಯೆ, ಧಾತು ಕಾವ್ಯ ವ್ಯಾಖ್ಯೆ, ತಾಳ ಪ್ರಸ್ತಾರಂ, ಶೃಂಗಾರ ವಿಂಶತಿ, ದೌರ್ಭಾಗ್ಯ ಮಂಜರಿ, ಸೂರ್ಯಾಷ್ಟಕ—ಈ ಗ್ರಂಥಗಳೆಲ್ಲವೂ ಕುಂಜನ್ ನಂಬಿಯಾರರಿಂದ ರಚಿತವಾಗಿದ್ದರೂ ಅವರು ಜನಪ್ರಿಯ ಕವಿಯಾಗಿ ಪ್ರಸಿದ್ಧಿಯಾದುದು ಅವರ ತುಳ್ಳಲ್ ಕಥನ ಕಾವ್ಯಗಳಿಂದ.

ತುಳ್ಳಲ್ ಪ್ರಭೇದಗಳು

'ತುಳ್ಳಲ್' ನೃತ್ಯಕಲೆಯ ಪ್ರಾಧಾನ್ಯವನ್ನು ಸೂಚಿಸುತ್ತದೆ. ನೃತ್ಯ, ಗಾನ, ಅಭಿನಯ ಮೊದಲಾದ ಕಲೆಗಳನ್ನೆಲ್ಲ ಇದು ಒಳಗೊಂಡಿದೆ. 'ಪರಯನ್ ತುಳ್ಳಲ್', 'ಓಟ್ಟನ್ ತುಳ್ಳಲ್', 'ಶೀತಂಗನ್ ತುಳ್ಳಲ್' ಎನ್ನುವ ಮೂರು ಪ್ರಭೇದಗಳು 'ತುಳ್ಳಲ್' ನಲ್ಲಿ ಪ್ರಯೋಗದಲ್ಲಿವೆ. 'ಪರಯನ್', 'ಓಟ್ಟನ್', 'ಶೀತಂಗನ್'—ಇವು ಕೇರಳದ ಜಾತಿವಾಚಕ ಹೆಸರುಗಳು.

ಪರಯನ್ ತುಳ್ಳಲ್

ಈ ನೃತ್ಯವನ್ನು ಅಭಿನಯಿಸುವವನ ಕೊರಳಿನಲ್ಲಿ ಒಂದು ಹಾರ, ಹಣೆಯಲ್ಲಿ ಗಂಧದ ಪಟ್ಟೆ, ಕಣ್ಣಂಚಿನಲ್ಲಿ ಉದ್ದವಾದ ಕಾಡಿಗೆ ಗೆರೆ, ನಾಗ ಹೆಡೆಯ ಕಿರೀಟ, ಸೊಂಟಕ್ಕೆ ಗೆಜ್ಜೆ ಪಟ್ಟಿ, ಬಲದ ಕಾಲಿಗೆ ಮಾತ್ರ ಗೆಜ್ಜೆ. ಸೊಂಟದಿಂದ ಕೆಳಕ್ಕೆ ಕೆಂಪು ವಸ್ತ್ರ. ಆ ವಸ್ತ್ರದ ಮೇಲೆ ಮಡಿಕೆ ಮಡಿಕೆ ಯಾಗಿ ಇಳಿಬಿಟ್ಟ ಬಿಳಿಯ ಪಟ್ಟೆ. ಸಾಮಾನ್ಯವಾಗಿ ಈ ಅಭಿನಯಕಾರನ ವೇಷ ಶಿವನ ವೇಷವನ್ನು ಹೋಲುತ್ತದೆ. ಈ ತುಳ್ಳಲಿನ ಗಾನಾಭಿನಯಗಳು ಸಾಗುವುದು ಮಂದಗತಿಯಲ್ಲಿ.

ಶೀ ತಂಗನ್ ತುಳ್ಳಲ್

ತಲೆಯ ಅರ್ಧಭಾಗಕ್ಕೆ ಕರಿಯವಸ್ತ್ರದ ಮುಸುಕು, ಕಾಡಿಗೆ ಬಳಿದ ಕಣ್ಣುಗಳು, ಎರಡು ಕಾಲಿಗೂ ಗೆಜ್ಜೆ, ತೆಂಗಿನ ಎಳೆಯ ಗರಿಯಿಂದ ಹೆಣೆದು ಮಾಡಿದ ಕೈ ಕಡಗ, ಎದೆಯ ಮೇಲೆ ದಾರದಲ್ಲಿ ಕಟ್ಟಿ ಇಳಿಬಿಟ್ಟ ತೆಂಗಿನ ಎಳೆಯ ಗರಿಗಳು. ಕಿರೀಟವೂ ತೆಂಗಿನ ಗರಿಯಿಂದಲೇ ಮಾಡಿದುದು. ಗಾನಾಭಿನಯದ ವೇಗ, ಅತಿ ಮಂದವೂ ಅಲ್ಲ, ಅತಿ ವೇಗವೂ ಅಲ್ಲ.

ಓಟ್ಟನ್ ತುಳ್ಳಲ್

ಮೇಲಿನ ನೃತ್ಯಗಳಿಂದ ಹೆಚ್ಚು ಆಕರ್ಷಕವಾದ ನೃತ್ಯ. ವೇಷವೂ ಆಕರ್ಷಕ. ಹೆಡೆ ಬಿಚ್ಚಿದ ಸರ್ಪ ಮುಖಾಕೃತಿಯಲ್ಲಿರುವ ಕಿರೀಟ. ಕಣ್ಣಿಗೆ ಕಾಡಿಗೆ, ಕೈಗೆ ಕಡಗ, ತೋಳಿಗೆ ತೋಳಬಂದಿ, ಸೊಂಟಕ್ಕೆ ನಡುಪಟ್ಟಿ. ಎದೆಯ ಭಾಗವನ್ನು ಮುಚ್ಚಲು ಮುತ್ತು ರತ್ನಗಳಿಂದ ಅಲಂಕೃತವಾದ ಮರದ ಕವಚ. ಮುಖಕ್ಕೆ ಹಸಿರು ಬಣ್ಣ. ಎರಡು ಕಾಲಿಗೂ ಗೆಜ್ಜೆ. ಸುಂಡೆ ಹೂವಿನ ರಸದಿಂದ ಕೆಂಪಗೆ ಮಾಡಿಕೊಂಡ ಕಣ್ಣುಗಳು, ಇವಿಷ್ಟು ಓಟ್ಟನ್ ತುಳ್ಳಲ್ ಅಭಿನಯಕಾರನ ವೇಷ ಭೂಷಣಗಳು. ಈ ತುಳ್ಳಲಿನ ಗಾನಾಭಿನಯಗಳು ತೀವ್ರ ಗತಿಯಲ್ಲಿ ಸಾಗುತ್ತವೆ. ನರ್ತನಕ್ಕಿಂತ ಭಾವಾಭಿನಯ ಹೆಚ್ಚು. ಇಂದಿಗೂ ಕೇರಳದಲ್ಲಿ ಹೆಚ್ಚು ಪ್ರಚಾರದಲ್ಲಿರುವುದು ಓಟ್ಟನ್ ತುಳ್ಳಲ್.

ಒಂದು ಸಣ್ಣ ಮದ್ದಳೆ ಮತ್ತು ಕೈತಾಳ ಈ ನೃತ್ಯಕ್ಕೆ ಬೇಕಾ

ಗಿರುವ ಪಕ್ಕವಾದ್ಯಗಳು. ಇದಕ್ಕೊಂದು ಪ್ರತ್ಯೇಕವಾದ ರಂಗ ಸಜ್ಜಿಕೆ ಬೇಕೆಂದಿಲ್ಲ. ಕಥಕ್ಕಳಿ, ಭರತನಾಟ್ಯ ಮುಂತಾದ ನೃತ್ಯಗಳಲ್ಲಿ ಕಂಡುಬರುವ ತಾಳಗಳಿಗಿಂತ ವೈವಿಧ್ಯತೆಗಳುಳ್ಳ ತಾಳಗಳನ್ನು ಈ ನೃತ್ಯಕ್ಕೆ ಅಳವಡಿಸಿಕೊಳ್ಳಲಾಗಿದೆ. ತುಳ್ಳಲ್ ಕಾರನ ವೇಷ ಯಾವ ಕಥಾ ಪಾತ್ರದ ವೇಷವನ್ನೂ ಹೋಲುವುದಿಲ್ಲ. ಮೇಲೆ ಹೇಳಿದ ವೇಷಗಳಿಂದ ಯಾವ ಪೌರಾಣಿಕ ಕಥಾ ಪಾತ್ರಗಳನ್ನೂ ಅಭಿನಯಿಸಬಹುದು. ಮೊದಲಿಂದ ಕೊನೆಯವರೆಗೆ ನಿರಂತರವಾಗಿ ನೃತ್ಯ ಸಾಗಿರುತ್ತದೆ. ಅದೇ ರೀತಿ ಪಕ್ಕವಾದ್ಯ ನುಡಿಸುವುದೂ ಹಾಡುವುದೂ ಇದ್ದೇ ಇರುತ್ತದೆ. ತುಳ್ಳಲ್‌ಕಾರ ಹಾಡಿದ ಪದಗಳನ್ನು ಪಕ್ಕವಾದ್ಯದವರು ಪುನರಾವರ್ತಿಸುತ್ತಾರೆ. ಅವರು ಹಾಡುವಾಗ ತುಳ್ಳಲ್‌ಕಾರ ಆ ಪಾದಗಳ ಶಬ್ದಾರ್ಥಗಳಿಗನುಸಾರವಾಗಿ ಕೈ ಮುದ್ರೆಗಳ ಮೂಲಕ ಅಭಿನಯಿಸಿ ಪ್ರದರ್ಶಿಸುತ್ತಾನೆ. ಕೇರಳದ ನೃತ್ಯಕಲೆಯಾದ ಕಥಕ್ಕಳಿ ಒಂದು ಶಾಸ್ತ್ರೀಯ ಕಲೆ. ಅದನ್ನು ಆಸ್ವಾದಿಸಲು ಸಂಗೀತ, ಸಾಹಿತ್ಯ, ನಾಟ್ಯಶಾಸ್ತ್ರ, ಭಾಷಾಜ್ಞಾನ, ಕಾವ್ಯಪರಿಚಯ ಇತ್ಯಾದಿಗಳ ಜ್ಞಾನ ಸ್ವಲ್ಪ ಮಟ್ಟಿಗಾದರೂ ಇರಲೇಬೇಕು. ಜನಸಾಮಾನ್ಯರು ಸುಲಭದಲ್ಲಿ ಅರ್ಥಮಾಡಿಕೊಳ್ಳಬಹುದಾದ, ಅಭಿನಯಿಸಲೂ ಬಹುದಾದ ಕಲೆ ತುಳ್ಳಲ್.

ತುಳ್ಳಲ್ ಕಥೆಗಳ ಭಾಷಾಶೈಲಿ

ಗ್ರಂಥಭಾಷೆಗಿಂತ ಹೆಚ್ಚಾಗಿ ಆಡುಮಾತು. ಸಂಭಾಷಣೆಯ ಸೈಜತೆಗೆ ಹೆಚ್ಚು ಪ್ರಾಧಾನ್ಯ. ನಾಣ್ಣುಡಿಗಳು, ಆಡುಮಾತು

ಗಳು, ಹಾಡಿನ ರೂಪದಲ್ಲಿ ಪ್ರಕಟಗೊಳ್ಳುತ್ತವೆ. ತುಳ್ಳಲ್ ಕಾವ್ಯರಚನೆಯ ಪ್ರಧಾನ ಗುರಿ ಪೌರಾಣಿಕ ಕಥಾ ಪಾತ್ರಗಳೊಂದಿಗೆ, ಸನ್ನಿವೇಶಗಳೊಂದಿಗೆ ಸಮಕಾಲೀನ ಜೀವನದ ರೀತಿ ನೀತಿಗಳನ್ನು ಅಳವಡಿಸಿ ಹಾಸ್ಯರಸ ಪ್ರತಿಪಾದನೆಯ ಮೂಲಕ ಸಮಾಜಕ್ಕೆ ಸನ್ಮಾರ್ಗವನ್ನು ನಿರ್ದೇಶಿಸುವುದು. ಎಲ್ಲೆಡೆಗಳಲ್ಲೂ ಹಾಸ್ಯ ಬರಲೇಬೇಕು ಎಂಬ ನಿಯಮವಿಲ್ಲ. ಆದರೂ ಕಥಾವಸ್ತುವಿಗೆ ಹೊಂದಿಕೆಯಾಗುವಂತೆ ಹಾಸ್ಯರಸ ಪ್ರತಿಪಾದನೆ.

ಕಲ್ಯಾಣ ಸೌಗಂಧಿಕಾ

ಇದು ನಂಬಿಯಾರರ ಮೊದಲ ತುಳ್ಳಲ್ ಕಥೆ ಎಂದು ಹಿಂದೆಯೇ ತಿಳಿಸಲಾಗಿದೆ. ಈ ಕಥೆಯ ಕೆಲವು ಭಾಗಗಳನ್ನು ಮಾತ್ರ ಇಲ್ಲಿ ನೋಡೋಣ.

ಗಣಪತಿಯ ಸ್ತುತಿ, ಸರಸ್ವತಿಯ ಸ್ತುತಿ ಮತ್ತು ಚಂಬಕಶೇರಿಯ ರಾಜನಾದ ದೇವನಾರಾಯಣನ ಸ್ತುತಿಯಿಂದ ಈ ಕಥೆ ಪ್ರಾರಂಭವಾಗುತ್ತದೆ. ಪಾಂಡವರು ದ್ರೌಪತಿಯೊಡನೆ ವನವಾಸವನ್ನು ಕೈಗೊಂಡಿದ್ದಾಗ, ಕಲ್ಯಾಣ ಸೌಗಂಧಿಕಾ ಪುಷ್ಪದ ಪರಿಮಳ ಅವರು ವಾಸಿಸುತ್ತಿದ್ದ ಕಾಡನ್ನೆಲ್ಲ ವ್ಯಾಪಿಸಿದ್ದಾಗ ದ್ರೌಪತಿ ಆ ಪುಷ್ಪವನ್ನು ತರುವಂತೆ ಭೀಮನನ್ನು ಕೇಳಿಕೊಳ್ಳುತ್ತಾಳೆ.

'ಹಿಂದೆಂದು ಈ ಬಗೆಯ ವಸ್ತುವ ಕಾಣೆನು
ಬಯಸಿದೆ ನಾನದ ಕಿತ್ತುತಾ ವಲ್ಲಭ |
ಕಂಡುದೆಲ್ಲವು ಬೇಕು ಹೆಣ್ಣುಗಳೇ ಹೀಗೆ
ಎಂದು ಭಾವಿಸಬೇಡ | ಬರಿದೆ ಹೇಳಿದುದಲ್ಲ
ಕೇಳಿದ ವಸ್ತುವ ತಂದುಕೊಡುವೆ ನೀನು
ಕಂದರ ಗಿರಿಗಳ ದಾಟಲು ಬಲಬೇಕು |
ನೀನಂಥ ಬಲಶಾಲಿ ನಾನದಬಲ್ಲೆ'

ಎಂದು ಭೀಮನನ್ನು ಹೊಗಳಿ ಉಬ್ಬಿಸುತ್ತಾಳೆ. ಅವಳ ಒಂದೊಂದು ಮಾತೂ ಭೀಮನನ್ನು ಉತ್ಸಾಹಗೊಳಿಸುತ್ತದೆ. ಮತ್ತೂ ಹೇಳುತ್ತಾಳೆ: "ಪ್ರಿಯತಮ, ನೀನು ಹಿಡಿಂಬನನ್ನು ಹಿಂಡಿದವನು, ಬಕನನ್ನು ಸದೆಬಡಿದವನು, ಕಿರ್ಮೀರನನ್ನು ಕೊಂದವನು. ಹೆಣ್ಣಿನ ಹೊಗಳಿಕೆಗೆ ಭೀಮ ಉಬ್ಬಿಹೋಗಿ ಪಡಬಾರದ ಪಾಡು ಪಡಬೇಕಾಯಿತು ಎಂದು ಎಲ್ಲಿ ಜನರು ಪರಿಹಾಸ ಮಾಡುತ್ತಾರೋ ಎನ್ನುವ ಮನೋವಿಷಾದ ನಿನಗೆ ಇದ್ದಲ್ಲಿ ಅದನ್ನು ತಿಳಿಸು. ನಾನು ನಿನ್ನನ್ನು ಈ ಕಾರ್ಯದಲ್ಲಿ ಒತ್ತಾಯಿಸುವುದಿಲ್ಲ. ಹೆಣ್ಣಿನ ಮಾತನ್ನು ಸರಿಯಾಗಿ ಪ್ರಮಾಣಿಸಿ ನೋಡದೆ ರಾಮಾದಿಗಳು ಕಷ್ಟಕ್ಕೊಳಗಾದರು. ಅದಕ್ಕಾಗಿ ನಾನು ಈ ಮಾತನ್ನು ಹೇಳಿದೆ. ನನ್ನ ಮಾತನ್ನು ಚೆನ್ನಾಗಿ ಆಲೋಚಿಸಿ ತೀರ್ಮಾನಿಸು." ದ್ರೌಪದಿಯ ಮಾತನ್ನು ಕೇಳಿ ಭೀಮ ಒಮ್ಮೆ ಗಟ್ಟಿಯಾಗಿ ನಕ್ಕು ಬಳಿಕ ಹೇಳಿದ:

'ಚಪಲ ಸ್ತ್ರೀಗಳೇ ಪೋಲೆ ಕಥಿಕ್ಕುನ್ನೆಂದೆಡೊ ಬಾಲೆ
ಸಫಲಂ ನಿನ್ನುಡೆ ಕಾರ್ಯಂ ಸಪದಿ ಸಂಭವಿಚ್ಚೀಡುಂ'
[ಚಪಲ ಸ್ತ್ರೀಗಳಹಾಗೆ ನುಡಿವೆಯೇತಕೆ ನಾರಿ
ಸಫಲವಾಗುವುದೀಗ ನಿನ್ನದೀ ಕಾರ್ಯವು]

"ಪ್ರಿಯೆ! ನಿನ್ನ ಅಭೀಷ್ಟವನ್ನು ಈಡೇರಿಸುವುದೆಂದರೆ ಈ ಭೀಮನಿಗೆ ಬಹಳ ಸಂತೋಷ. ಸ್ವರ್ಗ, ಮರ್ತ್ಯ, ಪಾತಾಳಗಳಲ್ಲಿ ಎಲ್ಲಿಯೇ ಇದ್ದರೂ ನೀನು ಬಯಸಿದ ಆ ಕಲ್ಯಾಣ ಸೌಗಂಧಿಕಾ ಪುಷ್ಪವನ್ನು ಕಿತ್ತು ತರುತ್ತೇನೆ. ನನಗೆ ಅಡ್ಡ ಬರುವವರು

'ಸುರನ್ಮಾರ್ ದಾನವನ್ಮಾರುಂ ನರನ್ಮಾರ್ ಪನ್ನಗನ್ಮಾರುಂ
ಚರನ್ಮಾರ್ ಚಾರಣನ್ಮಾರುಂ ಪರನ್ಮಾರ್ ಪಾರ್ಥಿವನ್ಮಾರುಂ'

ಯಾರೇ ಇರಲಿ, ಅವರನ್ನು ಈ ಗದೆಯಿಂದ ಸದೆಬಡಿದು ನಿನ್ನ ಬಯಕೆಯನ್ನು ಈಡೇರಿಸಿಕೊಂಡು ಬರುತ್ತೇನೆ" ಎಂದು ಹೇಳಿ ಭೀಮ ಉತ್ತರ ದಿಕ್ಕಿಗೆ ಹೊರಟ. ಘೋರಾರಣ್ಯ ಒಂದಕ್ಕೆ ಕಾಲಿರಿಸಿದ ಭೀಮನನ್ನು ಕಂಡು ಮೃಗಗಳೆಲ್ಲವೂ ದಿಕ್ಕಾಪಾಲಾಗಿ ಓಡಿದುವು. ದಟ್ಟವಾಗಿ ಬೆಳೆದು ನಿಂತಿದ್ದ ಕಾಡಿನಲ್ಲಿ ಸಂಚರಿಸಲು ಮಾರ್ಗವೇ ಇರಲಿಲ್ಲ. ಭೀಮ ತನ್ನ ಗದೆಯನ್ನು ಬಲವಾಗಿ ಬೀಸಿ ಒಂದು ಮರಕ್ಕೆ ಅಪ್ಪಳಿಸಿದ.

'ಪೆಟ್ಟೆನ್ನೊರು ಮರಂ ಪೊಟ್ಟಿಪ್ಪಿಳರ್ನ್ನಾಶು
ಮಟ್ಟೊರು ವೃಕ್ಷೇಪದಿಕ್ಕುನ್ನೇರತ್ತು
ಮಟ್ಟದುಂ ಖಂಡಿಚ್ಚು ಮಟ್ಟದಿನ್ಮೇಲ್ ವೀಣು
ಮಟ್ಟದುಂ ಮಟ್ಟದುಂ ಮಟ್ಟದುಂ ಭಸ್ಮಮಾಯ್'

ಥಟ್ಟನೆ ಒಂದು ಮರ ಮುರಿದು ಮತ್ತೊಂದರ ಮೇಲೆ ಬಿದ್ದಿತು. ಅದು ಮತ್ತೊಂದರ ಮೇಲೆ ಬಿದ್ದಿತು. ಹೀಗೆ ಮತ್ತೊಂದು ಮತ್ತೊಂದು ಮತ್ತೊಂದು—ಎಲ್ಲ ಮರಗಳೂ ಮುರಿದುಹೋದವು. ಹೀಗೆ, ದಾರಿಯನ್ನು ಸುಗಮಗೊಳಿಸಿ ಕೊಂಡು ಮುಂದೆ ಮುಂದೆ ಬರುತ್ತಿದ್ದಾಗ ಗಂಧಮಾದನ ಪರ್ವತವನ್ನು ದಾಟಿ ಕದಳೀವನಕ್ಕೆ ಪ್ರವೇಶಿಸಿದ ಭೀಮ ಅಲ್ಲಿ ಒಬ್ಬ ವೃದ್ಧ ವಾನರ, ಬಾಲವನ್ನು ನೀಡಿ ಮಲಗಿದ್ದುದನ್ನು ಕಂಡ. ಎಲ್ಲ ಮೃಗಗಳೂ ದಿಕ್ಕಾಪಾಲಾಗಿ ಓಡಿಹೋದದ್ದನ್ನು ಕಂಡಿದ್ದ ವಾಯುಪುತ್ರನಿಗೆ, ಆ ಮುದಿವಾನರ ದಾರಿ ಬಿಡಲಿಲ್ಲ ವೆಂದು ಸಿಟ್ಟು ಬಂದಿತು :

'ನೋಕ್ಕಡಾ ನಮ್ಮುಡೇ ಮಾರ್ಗೇಕಿಡಕ್ಕುನ್ನ
ಮರ್ಕಟಾ ನೀಯಂಙ್ಙು ಮಾರಿಕ್ಕಿಡಕ್ಕಡಾಶಡಾ
ನಾಟ್ಟಿಲ್ ಪ್ರಭುಗಳೆ ಕಂಡಾಲರಿಯಾತ್ತ
ಕಾಟ್ಟಿಲ್ ಕಿಡಕ್ಕುನ್ನೊರು ಮೂಳಿ ಕುರಙ್ಙನೀ'

"ನಮ್ಮದಾರಿಗೆ ಅಡ್ಡವಾಗಿ ಬಿದ್ದಿರುವ ಮರ್ಕಟಾ, ದಾ
ಬಿಟ್ಟು ಒಂದು ಕಡೆಗೆ ಹೋಗಿ ಬಿದ್ದುಕೋ. ನಾಡನ್ನಾಳು
ಜನರನ್ನು ಕಂಡರಿಯದ ಕಾಡುಕೋತೀ ದಾರಿಬಿಡು" ಎಂದ.

ತಗ್ಗಿದ ಸ್ವರದಲ್ಲಿ ವಾನರ ಉತ್ತರ ನೀಡುವುದು

'ಎಟ್ಟುಂ ಕಯರ್ತ್ತು ಪರಯುನ್ನದೆಂದು ನೀ
ಎಟ್ಟು ಮಾರಾನೆನಿಕೇದು ಮೆಳುದಲ್ಲ
ಮಟ್ಟೊರು ಮಾರ್ಗಮಾಯ್ ಪೋಯ್ಕೊಳ್ಳಣೇ ಭವಾನ್'

[ಯಾಕಪ್ಪ ಸಿಟ್ಟಾಗಿ ಹಾಗೆ ಹೇಳುವೆ ನೀನು
ದಾರಿಯ ಬಿಡಲು ಮೇಲೇಳಲಾರೆ
ಬೇರೊಂದು ಮಾರ್ಗದಿ ಹೋಗಯ್ಯ ಸ್ವಾಮಿ]

ಭೀಮನನ್ನು ಕಂಡರೇ ಭಯಗೊಂಡು ಓಡಬೇಕು. ಅವನ
ಹೇಳುವುದೇ ಬೇಡ. ಅವನು ಹೇಳಿದ ಮೇಲೂ ಪ್ರತ್ಯುತ್ತ
ಕೊಟ್ಟರೆ ಅವನಿಗೆ ಸಿಟ್ಟೇರುವುದಿಲ್ಲವೆ ?

"ಎಲಾ ಮುದಿಕೋತಿ! ನಾನಾರೆಂದು ಬಲ್ಲೆಯಾ ?" ಎಂದ
ತಾನು, ತನ್ನ ವಂಶ, ತನ್ನ ಸಹೋದರರು, ತನ್ನ ಪರಾಕ್ರಮ
ಗಳೆಲ್ಲವನ್ನೂ ಆ ವಾನರನ ಹತ್ತಿರ ಹೇಳುತ್ತಾ ಇದ್ದಾಗ
ವಾನರ :

'ನಿನ್ನೆಡೋ ಭೀಮಾ, ನಯಙ್ಙನ್ ಭವಾನೆನ್ನು
ಚೊನ್ನವಾಕ್ಕೆಲ್ಲಾಂ ಕಣಕ್ಕಿನುಕೊಡುಮೋ ?

ಧರ್ಮಜನ್ ಮುಂಬಾಯ ಧಾರ್ಮಿಕರ್ ನಿಙ್ಙಳ್
ಧರ್ಮಮಲ್ಲಾದೊನ್ನು ಚೆಯ್ಯುಗಯಿಲ್ಲೆಯೋ ?
ಪಾಂಚಾಲಿಯೆನ್ನೊರು ಪೆಣ್ಣಿನೆ ಕಂಡಿಟ್ಟು
ಪಂಚಬಾಣಾರ್ತಿ ಪಿಡಿಪೆಟ್ಟಹೋ ನಿಂಗ
ಐಂಜುಪೇರುಂ ಚೆನ್ನು ಕೈಕ್ಕು ಪಿಡಿಚ್ಚುಕೊಂ
ಡಂಜಾದೆ ವೇಳಿ ಕಳಿಚ್ಚೆನ್ನು ಕೇಟ್ಟು ಞಾನ್
ಅಂಜೆಂಗಿಲಂಜುಂ ಕಣಕ್ಕೆನ್ನವಳೊಕ್ಕರು
ಚಾಂಚಲ್ಯವುಮಿಲ್ಲತ್ತೆಲ್ಲು ಪೋಲುಂ ನಿಂಗ
ಐಂಜು ಜನತ್ತೆಯುಂ ಕಣ್ ಮುನತ್ತಲ್ಲಿನಾಲ್
ವಂಚಿಪ್ಪದೆನ್ನವಳ್ ಪೋರುಂ ವೃಕೋದರ !
ನಾಲಂಜುಭರ್ತ್ತಾರ್ ವೊರುತ್ತಿಕ್ಕುತಾನದು
ನಾಲುಜಾತಿಕ್ಕು ವಿಧಿಚ್ಚದಿಲ್ಲೋರ್ಕ್ಕಣಂ
ನಾಲುಪೇರ್ ಕೇಟ್ಟಾಲ್ ನಿರಕ್ಕಾತ್ತವಸ್ತುವೀ
ವಾಲುಳ್ಳ ವಾನರನ್ಮಾರ್ಕ್ಕುಂ ಚಿದಂವರಾ
ಚೇಟ್ಟತ್ತಿಯಾವೊಟ್ಟನುಜತ್ತಿಯಾವೊಟ್ಟು
ಚೇಟ್ಟಗಳ ತನ್ನೆ ಕಳತ್ರ ಮೆನ್ನಿಂಜನೆ
ಕಾಟ್ಟುನ್ನ ಗೋಷ್ಠಿಗಳ್ ಕೇಟ್ಟಾಲ್ ಚಿರಿಯಾಗು’

[ಚೆನ್ನಾಯ್ತು ಭೀಮ, ನಯವಂತ ಸ್ವಾಮಿ
ಆಡಿದ ಮಾತೆಲ್ಲ ಲೆಕ್ಕಕ್ಕೆ ಬಂದೀತೆ ?
ಧರ್ಮಜ ಮುಂತಾದ ಧಾರ್ಮಿಕರ್ ನೀವೆಲ್ಲ
ಧರ್ಮವಲ್ಲದ್ದನ್ನು ಕೈಕೊಳ್ಳಲಿಲ್ಲವೆ ?
ಪಾಂಚಾಲಿಯೆಂಬೊಂದು ಹೆಣ್ಣನ್ನು ಕಂಡಾಗ
ಪಂಚಬಾಣಾರ್ತಿಗಳಾದಿರಹೋ ನೀವು
ಅವಳ ಕೈಹಿಡಿದಿರಿ ನೀವೈವರೂ ಹೋಗಿ
ಅಳುಕದೆ ಹೆಂಡತಿ ಎಂದುದ ಕೇಳಿದೆ
ಐದಾದರೈದರಲೆಕ್ಕದ ಸಂಕೋಚ
ಅವಳಿಗಿನಿತೂ ಇಲ್ಲ. ನಿಮ್ಮೈವರನ್ನು

ಕುಡಿಗಣ್ಣಿನಲ್ಲೇ ಕುಣಿಸಿದ ಹೆಣ್ಣು
ವಂಚಿಸಲೇನಯ್ಯ ಹೇಳು ವೃಕೋದರ?
ನಾಲ್ಕೈದು ಗಂಡಂದಿರೊಬ್ಬಳಿಗೆಂತಯ್ಯ
ನಾಲ್ಕು ಜಾತಿಗಳಿಗು ವಿಧಿಸಲಿಲ್ಲದನಯ್ಯ
ನಾಲ್ಕು ಮಂದಿಗಳಿಂದ ಕೇಳಿದರೊಪ್ಪರು
ಬಾಲದ ಕೋತಿಯು ಜಾತಿಯೊಳೂ ಇಲ್ಲ
ಅತ್ತಿಗೆಯಾಗಲಿ ನಾದಿನಿಯಾಗಲಿ
ಒಟ್ಟಿಗೆ ನೀವೆಲ್ಲ ಹೆಂಡತಿಯೆನ್ನುತ
ನಡೆಸಿದ ಚೇಷ್ಟೆಗಳೇ ನಗು ತರುವುವು.]

"ಮತ್ತೊಂದು ಸಂಗತಿಯನ್ನೂ ಕೇಳಿದ್ದೇನೆ. ಮಹಾ
ಪರಾಕ್ರಮಿಯಾದ ನಿನ್ನ ಕಣ್ಣೆದುರಿನಲ್ಲಿಯೇ ನಿನ್ನ ಪತ್ನಿಯ ಮಾ
ಭಂಗವಾಗುತ್ತಿದ್ದಾಗ ನೀನೇನು ಮಾಡುತ್ತಿದ್ದೆ? ಮಾತನಾಡ
ಸುಮ್ಮನೆ ಕುಳಿತಿದ್ದೆಯಲ್ಲವೆ? ಆಗ ನಿನ್ನ ಪರಾಕ್ರ
ಕಾಶಿಯಾತ್ರೆಗೆ ಹೋಗಿತ್ತೇ? ಈ ಮುದಿಕೋತಿಯ ಮೇಲೆ
ನಿನ್ನ ಪರಾಕ್ರಮ?"

ಹೀಗೆ ವಾಯುಪುತ್ರರಿಬ್ಬರ ಸಂಭಾಷಣೆ ಬಹುದೀರ್ಘವಾ
ಮುಂದುವರಿಯುತ್ತದೆ. ವಾನರನ ಒಂದು ರೋಮವನ್ನು
ತನ್ನ ಗದೆಯಿಂದ ಅಲುಗಾಡಿಸಲಾಗದ ಭೀಮ ಗದೆಯನ್ನ
ಬಿಸಾಡಿ ಮುಷ್ಟಿಯುದ್ಧಕ್ಕೆ ನಿಲ್ಲುತ್ತಾನೆ. ವಾನರ ತ
ನಿಜರೂಪದಲ್ಲಿ ಹನುಮಂತನಾಗಿ ಕಾಣಿಸಿಕೊಳ್ಳುತ್ತಾನೆ. ಭೀ
ಹೊರಟುಬಂದ ಕಾರ್ಯಕ್ಕೆ ಮಾರ್ಗದರ್ಶನ ನೀಡುತ್ತಾ
'ಕಲ್ಯಾಣ ಸೌಗಂಧಿಕ'ವನ್ನು ತಂದು ಭೀಮ ದ್ರೌಪದಿಯನ್ನ
ಸಂತೋಷಪಡಿಸುತ್ತಾನೆ.

ದುರ್ಯೋಧನ ವಧಂ

ನಂಬಿಯಾರರು ಪೌರಾಣಿಕ ಕಥೆಗಳನ್ನು ಆರಿಸಿಕೊಂಡು ಅಭಿನಯ ಕಾವ್ಯಕ್ಕೆ ಅಳವಡಿಸುವಾಗ ಮೂಲ ಕಥೆಯನ್ನು ಯಥಾವತ್ತಾಗಿ ಯಾವ ಬದಲಾವಣೆಯೂ ಇಲ್ಲದೆ ಅಳವಡಿಸಿದ್ದಾರೆ ಎಂದು ಹೇಳುವಂತಿಲ್ಲ. ಎಷ್ಟೋ ಸಲ ಮೂಲ ಕಥಾವಸ್ತುವನ್ನು ಅಲ್ಲಲ್ಲಿ ಬದಲಾಯಿಸಿರುವುದೂ ಉಂಟು. ಮಹಾಭಾರತದಿಂದ ಆಯ್ದುಕೊಂಡ 'ದುರ್ಯೋಧನ ವಧಂ' ಕಥೆ ಅದಕ್ಕೊಂದು ಉದಾಹರಣೆ.

ಕಥೆ ಪ್ರಾರಂಭವಾಗುವುದು ಹೀಗೆ:

'ಧರ್ಮಾತ್ಮನ್‌ರಣಂ ಯಜ್ಞಮೆನ್ನಾಯಿಟ್ಟು
ಧರ್ಮಧರನ್ ಯಜ್ಞದೀಕ್ಷಿತುಡಜ್ಞಿ ನಾನ್
ಯಾಗಭೂಮಿ ಕುರುಕ್ಷೇತ್ರಮಾಯ್ ಕಲ್ಪಿಚ್ಚು
ಯೋಗೀಶ್ವರನ್ ಸ್ರುವಮಾಯ್ ಭವಿಚ್ಚುತದಾ
ಪಾಂಚಾಲಿಯುಷ್ಪೋಳರಣಿಯಾಯುಂವನ್ನು
ಚಾಂಚಲ್ಯಮೆನ್ನಿಯೇ ಭೀಮನ್ ದಹನನಾಯ್
ವಂಚಕನ್ ಗಾಂಧಾರಿಜನ್ ಹೋಮಧೇನುವಾಯ್
ಅಂಜಾದೆ ಕರ್ಣನ್ ಹವಿಸ್ಸದಾಯುಂತದಾ
ಕಾರ್ಯಮಾನುಷ್ಠಂ ಕರಸ್ಥಮಾಕ್ಕಿಕೊಂಡು
ಭಾರತ ಯುದ್ಧಂ ಪದಿನೆಟ್ಟು ನಾಳಗಂ
ಭಾಗೀರಥೀ ಸುತನ್ ಭೀಷ್ಮನ್ ಭಗದತ್ತನ್
ಭಾರದ್ವಾಜನ್ ಕರ್ಣನ್ ಸೌಬಲನ್ ಶಲ್ಯರುಂ
ಭೂರಿಶ್ರವಾ ಕೃತವರ್ಮ ಬೃಹದ್‌ಬಲನ್
ಭೂರಿಪ್ರಯೋಗಿಗಳಾಂ ತ್ರಿಗರ್ತಾದಿಗಳ್
ಕಶ್ಮಲನಾಯ ಶಕುನಿಯುಂ ಸೌಬಲರ್
ಅಶ್ಮಕನೋಡು ಜಯದ್ರಥನಾದಿಗಳ್'

ಎಲ್ಲರೂ ಈ ಯುದ್ಧದ ನಾಯಕರಾಗಿ ಹೋಗಿ ಆ ಯುದ್ಧಕ್ಕೆ ಹವಿಸ್ಸುಗಳಾದರು. ಸಹೋದರರು, ಮಕ್ಕಳು ಎಲ್ಲರೂ ಗತಿಸಿದರು. ದುರ್ಯೋಧನ ಪ್ರಾಣ ರಕ್ಷಣೆಗಾಗಿ ಆಲೋಚಿಸುತ್ತಾನೆ :

‘ಸಂತಾಪ ಶಾಂತಿಕ್ಕೊರು ವಳಿದೈವಮೋ
ಪಂಡು ಮುನಿವರನ್ ತನ್ನೊರು ಮಂತ್ರತ್ತೆ
ಕೊಂಡೆನಿಕ್ಕುಂಡಾಯ ಸಂಕಟಂ ಪೋಗುವಾನ್
ವಾರಿಯಿಲ್ ಮುಂಜಿ ಕಿಡಕ್ಕುನ್ನು ಮಹಾಮಂತ್ರ
ಮಾರುಮರಿಯಾದೆ ಞಾನ್ ಜಪಿಚ್ಚೀಡುಗಿಲ್
ವಾಳುಂ ಕುದಿರೆಯುಂ ಮುಂಡಾಮಿನಿಕ್ಕೊರು
ನಾಳುಂ ಪಿನ್ನೆನ್ನ ಜಯಿಕ್ಕಯಿಲ್ಲಾರುಮೋ’

“ಸಂತಾಪಶಾಂತಿಗೋಸ್ಕರ ಹಿಂದೆ ಮುನಿಪುಂಗವ ನನಗೆ ಅನುಗ್ರಹಿಸಿದ್ದ ಮಂತ್ರವನ್ನು ಜಪಿಸುತ್ತ ಯಾರಿಗೂ ತಿಳಿಯದಂತೆ ಮುಳುಗಿದ್ದರೆ ಒಂದು ಖಡ್ಗವೂ ಒಂದು ಕುದುರೆಯೂ ಉದಿಸುತ್ತವೆ. ಆ ಬಳಿಕ ನನ್ನನ್ನು ಸೋಲಿಸುವವರು ಯಾರೂ ಇರುವುದಿಲ್ಲ” ಎಂದು ತೀರ್ಮಾನಿಸಿ ನದಿಯ ಮಡುವಿನಲ್ಲಿ ಮಂತ್ರವನ್ನು ಜಪಿಸುತ್ತ ಕುಳಿತಿರುತ್ತಾನೆ. ವಿಧಿ ಅವನನ್ನು ಅಲ್ಲಿಯೂ ಕಾಡುತ್ತದೆ. ಅಲ್ಲಿಗೆ ಶ್ರೀಕೃಷ್ಣ ಭೀಮಾದಿಗಳ ಆಗಮನದಿಂದಾಗಿ ದುರ್ಯೋಧನ ಮೇಲೆದ್ದು ಬರಬೇಕಾಗುತ್ತದೆ. ದುರ್ಯೋಧನನ ಅಂತ್ಯ, ನದಿಯ ದಡದಲ್ಲಿ. ಒಟ್ಟು ಸುಮಾರು ಒಂದು ಸಾವಿರ ಪಾದಗಳುಳ್ಳ ಈ ತುಳ್ಳಲ್ ಕಥೆ ಅಲ್ಲಿಗೆ ಮುಗಿಯುತ್ತದೆ.

ಕೃಷ್ಣಲೀಲಾ

ಹಳೆಯ ಕಥಾ ವಸ್ತುಗಳಿಗೆ ಉದ್ದೇಶಪಟ್ಟು ಕೇರಳ ನಾಡು, ನುಡಿ, ಸಂಸ್ಕೃತಿಯನ್ನು ತುಳ್ಳಲ್ ಕಥೆಗಳಿಗೆ ಅಳವಡಿಸುವುದು ನಂಬಿಯಾರರ ಮುಖ್ಯ ಉದ್ದೇಶಗಳಲ್ಲೊಂದು. ಯಾವ ಪೌರಾಣಿಕ ಕಥೆಯೇ ಆಗಿರಲಿ ಅದರಲ್ಲಿ ನಾಯರರು, ನಂಬಿಯಾರರು ಇರುವಂತೆ; ಪೌರಾಣಿಕ ಸ್ತ್ರೀ ಪಾತ್ರಗಳ ಹೆಸರುಗಳೂ ಅಚ್ಚ ಕೇರಳ ಸ್ತ್ರೀಯರ ಹೆಸರುಗಳಾಗಿ ಸ್ಥಾನವನ್ನು ಪಡೆದಿವೆ.

‘ಕೃಷ್ಣಲೀಲಾ’ ತುಳ್ಳಲ್ ಕಥೆಯಲ್ಲಿ ಶ್ರೀ ಕೃಷ್ಣನನ್ನು ಕೊಲ್ಲಲು ನಂದಗೋಕುಲಕ್ಕೆ ಪೂತನಿ ಹೋದಾಗ ಅವಳು ಕಾಣುವುದು ಕೇರಳ ಸ್ತ್ರೀಯರನ್ನು.

‘ನಿಚ್ಚಿರಿ ಯಿಚ್ಚಿರಿ ನೆಟ್ಟಿಯುಣ್ಣಾಚ್ಚಿಯುಂ
ತಾಚ್ಚಿಯುಂ ನೇಚ್ಚಿಯುಂ ಮಿಟ್ಟಚ್ಚಿಯಚ್ಚಿಯುಂ
ಕುಞ್ಞಿಯುಂ ಕೊಞ್ಞಣ್ಣಿಂ ಕುಞ್ಞುಮಾಣಿಕ್ಯವುಂ
ಕುಞ್ಞುಮಾದೇವಿಯುಂ ಕುಞ್ಞಿಕಲ್ಯಾಣಿಯುಂ
ನಾಣಿಯುಂ ನೀಲುವುಂ ತಾಲುವುಂ ಮಾಲುವುಂ’

ಇವೇ ಮುಂತಾದ ಅನೇಕ ಹೆಸರುಗಳನ್ನು ಈ ಕಥೆಯಲ್ಲಿ ಕಾಣಬಹುದು.

ಕಾರ್ತವೀರ್ಯಾರ್ಜುನಂ

ಕೇರಳದ ಯಾವ ರಾಜನ ಸೈನ್ಯವೇ ಆಗಿರಲಿ ಅದರಲ್ಲಿರುತ್ತಿದ್ದವರು ಹೆಚ್ಚು ಮಂದಿ ನಾಯರರು. ನಂಬಿಯಾರರು

ಚಿತ್ರಿಸಿರುವ ರಾವಣನ ಸೈನ್ಯದಲ್ಲಾಗಲಿ ಮಾಹಿಷ್ಮತಿ ರಾಜನ ಸೈನ್ಯದಲ್ಲಾಗಲಿ ನಾಯರರಿದ್ದಾರೆ.

ರಾವಣ ತನ್ನ ಸೈನ್ಯವನ್ನು ಸಜ್ಜುಗೊಳಿಸಿಕೊಂಡು ಕಾರ್ತವೀರ್ಯಾರ್ಜುನನನ್ನು ಸೆರೆ ಹಿಡಿಯಲು ಹೊರಟು ನರ್ಮದಾ ನದಿಯ ತೀರದಲ್ಲಿ ಬೀಡುಬಿಟ್ಟಿದ್ದ. ತನ್ನ ಮಂತ್ರಿಯ ಮೂಲಕ ಕಾರ್ತವೀರ್ಯಾರ್ಜುನನಿಗೆ :

‘ಮುಳಗು ಸಮಸ್ತವು ಮೇಲ್ಪಿಕ್ಕೇಣಂ
ತೇಙ್ಙು ಕೌಙ್ಙುಗಳ್ ಮಾವುಂ ಪ್ಲಾವುಂ
ಎಙ್ಙುಮೆನಿಕ್ಕಿಹ ಕಂಡೆಳುದೇಣಂ
ಮಾಡಂಬಿಗಳುಡೆ ಪದವಿಗಳೊನ್ನುಂ
ಕೊಡುಗೆಯಿಲ್ಲಾ ನಮ್ಮುಡೆ ನಾಟ್ಟಿಲ್
ವೀಡನ್ಮಾರುಂ ವಿಳವುಗಳ್ ನೆಲ್ಲುಗಳ್
ವಿತ್ತಿಲಿರಟ್ಟಿ ನಮುಕ್ಕು ತರೇಣಂ
ನಾಟ್ಟಿಲಿರಿಕ್ಕು ಪಟ್ಟನ್ಮಾರುಂ
ನಾಲಾಲೊನ್ನು ನಮುಕ್ಕು ತರೇಣಂ
ವೀಟ್ಟಿಲಿರಿಕ್ಕುಂ ನಾಯನ್ಮಾರ್ ಪಡ
ವಿಲ್ಲುಂ ಕುಂತವು ಮೇಂದಿಜ್ಞೊಲ್ಲುಂ
ವೇಲಯೆಡುತ್ತು ಪೊರುಕ್ಕಣ ಮೆಲ್ಲಾ
ನ್ನಾಳುಂ ಪಾರ್ತಾ ದಶಮುಖ ಭವನೇ
ಕಳ್ಳು ಕುಡಿಕ್ಕುಂ ನಾಯನ್ಮಾರ್ಕಡಿ
ಕೊಳ್ಳಾಂದಾನು ಮದೋತ್ತಿಡೇಣಂ’

“ಮೆಣಸಿನ ಕಾಯಿಯನ್ನು ಪ್ರಾರ್ತಿ ಕಳುಹಿಸಿಕೊಡಬೇಕು. ತೆಂಗು, ಕಂಗು, ಮಾವು, ಹಲಸು ಮುಂತಾದುವುಗಳನ್ನು ನನಗೊಪ್ಪಿಸಬೇಕು. ಅಪ್ರಯೋಜಕರ ದರ್ಬಾರು ನಮ್ಮ ರಾಜ್ಯದಲ್ಲಿ ನಡೆಯಲಾರದು. ಕೃಷಿಕರು ಬೆಳೆದದ್ದರಲ್ಲಿ ಎರಡು

ಭಾಗವಮಾಡಿ ಒಂದು ಪಾಲನ್ನು ನನಗೊಪ್ಪಿಸಬೇಕು. ರಾಜ್ಯದಲ್ಲಿರುವ ಭಟ್ಟರಲ್ಲಿ ನಾಲ್ಕರಲ್ಲಿ ಒಬ್ಬರಂತೆ ನಮ್ಮ ನಾಡಿಗೆ ಕಳುಹಿಸಿಕೊಡಬೇಕು. ಸುಮ್ಮನೆ ಮನೆಯಲ್ಲಿ ಕುಳಿತು ಕಾಲ ಕಳೆಯುವ 'ನಾಯರ'ರೆಲ್ಲ ಸೈನ್ಯಕ್ಕೆ ಸೇರಿ ಕೆಲಸ ಮಾಡಬೇಕು. ಕಳ್ಳು ಕುಡಿದುಕೊಂಡು ವೃಥಾ ಕಾಲಹರಣ ಮಾಡುತ್ತಿರುವ ನಾಯರರಿಗೆಲ್ಲ ಶಿಕ್ಷೆ ವಿಧಿಸಲಾಗುತ್ತದೆ ಎನ್ನುವುದು ನೆನಪಿರಲಿ" ಎಂದು ಹೇಳಿ ಕಳುಹಿಸಿದ.

ಜನರನ್ನು ಸನ್ಮಾರ್ಗವಲಂಬಿಗಳನ್ನಾಗಿ ಮಾಡುವುದು ನಂಬಿಯಾರರ ಉದ್ದೇಶಗಳಲ್ಲೊಂದು. ಅದು ಅವರು ಆರಿಸಿಕೊಂಡಿರುವ ಪೌರಾಣಿಕ ಕಥಾವಸ್ತುಗಳನ್ನು ನೋಡಿದಾಗ ಸ್ಪಷ್ಟವಾಗುತ್ತದೆ. 'ಕಲ್ಯಾಣ ಸೌಗಂಧಿಕಾ' ತುಳ್ಳಲ್ ಕಥೆಯಲ್ಲಿ ಬರುವ ಅಹಂಕಾರಿಯಾದ ಭೀಮಸಪಾತ್ರ, 'ಗಣಪತಿ ಪ್ರಾದಲ್' ತುಳ್ಳಲ್ ಕಥೆಯ ಕುಬೇರ, 'ಘೋಷಯಾತ್ರೆ'ಯ ದುರ್ಯೋಧನ, 'ಕಾರ್ತವೀರ್ಯಾರ್ಜುನಂ' ತುಳ್ಳಲ್ ಕಥೆಯಲ್ಲಿ ಬರುವ ರಾವಣ — ಇವನ್ನೆಲ್ಲಾ ಅಹಂಕಾರವೇ ಮೂರ್ತಿವೆತ್ತಂತೆ, ಮಿತಿ ಮೀರಿದ ಅಹಂಕಾರ ಪರಿಹಾಸದಲ್ಲಿ ಪರ್ಯವಸಾನ ಹೊಂದುವಂತೆ ಚಿತ್ರಿಸಿ ಮನುಷ್ಯನಿಗೆ ಅಹಂಕಾರ ಸಲ್ಲದು ಎನ್ನುವ ತತ್ವವನ್ನು ಜನಸಾಮಾನ್ಯರಿಗೂ ಹೃದಯಂಗತವಾಗುವಂತೆ ಮಾಡಿದ್ದಾರೆ.

ಅಪ್ರತಿಮ ವೀರನಾದ ಸಹಸ್ರಬಾಹುಗಳ ಕಾರ್ತವೀರ್ಯಾರ್ಜುನನ ಸಾಹಸದ ಎದುರಿನಲ್ಲಿ ಅಹಂಕಾರದಿಂದ ಉಬ್ಬಿಹೋಗಿದ್ದ ದಶಕಂಠನ ಶೌರ್ಯವೇನೂ ನಡೆಯಲಿಲ್ಲ. ರಾವಣ ಕಾರ್ತವೀರ್ಯಾರ್ಜುನನ ಸೆರೆಯಾಳಾಗಬೇಕಾಯಿತು. ಸೆರೆಯಾಳಾದ ರಾವಣನ ಅಸಹಾಯಕ ಸ್ಥಿತಿಯನ್ನು ನಂಬಿಯಾರರು ಚಿತ್ರಿಸಿರುವುದು ಪರಿಹಾಸದ ಮೂಲಕ.

ಕಾರಾಗೃಹದಲ್ಲಿ ರಾವಣನಿಗೆ ಊಟ ಕೊಡುತ್ತಿದ್ದ ಸ್ತ್ರೀಯರು ಹೇಳುವುದು :

‘ಲಂಕಾಧಿಪತೇ ನಿಂಡೆ ಕಾಲ್‌ಮೇಲ್ ಕಿಡಕ್ಕುಂನಲ್ಲ
ಶೃಂಖಲ ಕಿಲುಙ್ಙುದೊರು ಚಿಂಕುಗಳಿಚ್ಚಿನ್ನಾಗಿಲ್
ಪಾಕ್ಕುವೆಟ್ಟಿಲನಲ್ಲ ತೂಕ್ಕು ಪೂಗಯಿಲಯುಂ
ಪಾರ್ಕಾದೆ ತರುನ್ನುಂಡು ಭೋಷ್ಕಲ್ಲ ಪಂಕ್ತಿಕಂಠ !
ಪತ್ತು ಮುಖಙ್ಙಳ್‌ಕೊಂಡು ಪತ್ತು ಪದಙ್ಙಳ್‌ಪಾಡಿ
ತಿತ್ತಿತ್ತೈ ಎನ್ನುಚಾಡಿ ನೃತ್ತಂ ಚೈಕ್ಕ ರಾವಣ
ಮತ್ತ ಗಜಙ್ಙಳುಡೆ ಮಸ್ತಕಂ ತಗರ್ಕುನ್ನ
ಹಸ್ತಙ್ಙಳಿಙ್ಙು ನಿಂಡೆ ನಕ್ತಂಚರಾಧಿನಾಥ !
ಪಣಿಮಿಳಿಮಾರುಡೆ ಪಾಣಿ ಪಿಡಿಚ್ಚಿಳಯ್ಕುಂ
ಪಾಣಿಗಳ್ ಕೊಂಡು ನಮ್ಮೆತ್ತಾಣು ತೊಳುದುಕೊಂಡು
ಕೇಣುಕಿಡಕಾದ ಪಾಣು ನೀಯೊಗಿಲ್‌ನಲ್ಲ
ಚೋರುಂ ಕರಿಯುಂ ಪುಳಿಂಚಾರುಂ ಕಾಚ್ಚಿಯ ಮೋರುಂ
ಆರುನ್ನ ದಿನು ಮುಂಬೇ ಕೂರುಳ್ಳ ಞಾನ್ ತರುವನ್
ಮಂಡೋದರಿಯೆನ್ನೊರು ಪೆಣ್ಣು ನಿನಕ್ಕುಂಡೆನ್ನು
ಮನ್ನಿಡಂತನ್ನಿಲ್ ಬಹು ಪೆಣ್ಣುಙ್ಙಳ್ ಚೊಲ್ಲೀಟ್ಟು
ಸಂದೇಹಮೊನ್ನುಂಡದು ನಿನ್ನೋಡು ಚೋದಿಕ್ಕುನ್ನು
ಒನ್ನೇ ಅವಳುಕ್ಕು ಮುಖ ಮುಳ್ಳೇನು ಕೇಟ್ಟು ಞಙ್ಙಳ್
ಒನ್ನಲ್ಲ ನಿನಕ್ಕು ಮುಖಂ ಅಂಜುಮಂಜು ಮುಂಡಲ್ಲೋ
ಎನ್ನಾಲೆಙ್ಙನೆಯವಳ್ ನಿನ್ನೋಡು ರಮಿಕ್ಕುನ್ನು ?
ಪತ್ತು ಪುರುಷನ್ಮಾರೋಡೊತ್ತು ವಿನೋದಿಕ್ಕುನ್ನ’
ಧೂಳಿಪೆಣ್ಣುಙ್ಙಳುಡೆ ಕೇಳ್ವಿಯುಮಳ್ಕುವನ್ನು

[ನಾರಿಯರೀಬಗೆ ಪೇಳುತಲಿದ್ದರು
ಲಂಕಾಧಿಪಾ ನಿನ್ನ ಕಾಲಿನಲ್ಲಿರುವ
ಸಂಕೋಲೆ ಶಬ್ದಿಸದಂತೆ ನರ್ತಿಸಿದರೆ

ಬುಲು ಒಳ್ಳೆ ಹೊಗೆಸೊಪ್ಪು ಎಲೆಯುಡಿಕೆಯುನ್ನು
ತಂದುಕೊಟ್ಟೇವು ನಿನಗಯ್ಯ ದಶಕಂಠ.
ಹತ್ತು ಹಾಡನು ಹತ್ತು ಮುಖದಲ್ಲಿ ಹಾಡಿ
ತಿತ್ತಿತ್ತೈ ಎಂದು ನರ್ತಿಸು ರಾವಣ.
ಮತ್ತಗಜಗಳ ನೆತ್ತಿಯ ನೊಡೆವಂತ
ಹಸ್ತಗಳೇನಾದುವಯ್ಯ ಲಂಕೇಶ.
ಏಣಾಕ್ಷಿಯರಪಾಣಿಗಳ ಸೆಳೆವಂಥ
ಪಾಣಿಗಳಿಂದ ನಮಗೆ ನಮಿಸುತ್ತ
ತಲೆಯುನ್ನು ಬಾಗುವೆಯಾದರೆ, ನಿನಗೆ
ಅನ್ನ ಸಾರು ಹುಳಿ ಕಾಸಿದ ಮಜ್ಜಿಗೆ
ಆರುವ ಮೊದಲೇ ಕೊಡುವೆನು ನಿನಗೆ.
ಮಂಡೋದರಿಯೆಂಬ ಹೆಂಡತಿಯುಂಟೆಂದು
ಇಲ್ಲಿಯ ಸ್ತ್ರೀಯರು ಹೇಳಿದ್ದ ಕೇಳಿ
ಸಂದೇಹವಾಗಿದೆ ; ನಿನ್ನನ್ನೆ ಕೇಳುವೆ
ಅವಳಿಗೊಂದೇ ಮುಖವೆಂದು ಕೇಳಿರುವೆನು
ನಿನ್ನದು ಒಂದಲ್ಲ ಹತ್ತುಂಟು ಮುಖಗಳು
ಎಂತಯ್ಯ ನಿನ್ನೊಡನವಳು ರಮಿಸುವಳು ?
ಹತ್ತು ಗಂಡಸರೊಟ್ಟಿಗಾಡುವಂಥ
ಗಯ್ಯಾಳಿ ಹೆಣ್ಣಿನ ಪಾಡಾಕೆಗಾಯ್ತು]

ಅಷ್ಟರಲ್ಲಿ ಅವಳ ಜೊತೆಯಲ್ಲಿದ್ದ ಮತ್ತೊಬ್ಬ ಸೇವಕಿ ಅವಳೊಡನೆ ಹೇಳುತ್ತಾಳೆ. ಆ ಮಾತನ್ನು ಕೂಡ ರಾವಣ ಕೇಳಿಸಿಕೊಳ್ಳಬೇಕಾಗುತ್ತದೆ :

'ಪೋಡೀ ! ಮಹಾರಾಜೇಂದ್ರನೋಡೀ ವಿಶೇಷಂ ಚೆನ್ನು
ಚೋದಿಚ್ಚಿಟ್ಟೆಂದಾವಶ್ಯಂ ಚೋದಿಚ್ಚಾಲೆಂದು ಚೇದಂ
ಓರೋ ದಿವಸಂ ಮುಖಮೋರೋನ್ನು ಚುಂಬಿಚ್ಚು ಕೊಂ
ಡೋರೋಮಲ್ ಕ್ರೀಡಿಕ್ಕುನ್ನದಾರೋಡು ಕೇಳ್ಪಿಕ್ಕುನ್ನು ?'

[ಅದನೇಕೆ ರಾಜನ ಕೇಳುವೆ ಹೋಗೇ
ಕೇಳಿದರೊಂದೇ ಬಿಟ್ಟರೂ ಒಂದೇ
ಒಂದೊಂದು ಮುಖವನ್ನು ಒಂದೊಂದು ದಿನವೂ
ಚುಂಬಿಸಿ ರಮಿಸುವುದನ್ನೇಕೆ ಕೇಳುವೆ]
ಇತ್ಥಂವನ್ನೋರು ಕೊಟ್ಟಂ ಸ್ತ್ರೀಗಳು
ಬದ್ಧಂ ಪರಯುನ್ನದು ಕೇಟ್ಟಪ್ಪೋಳ್
ನಾಣಂ ಪೂಂಡುಕಿಡನ್ನು ದಶಾಸನ್
ಪ್ರಾಣಂಪೋಗಾಞ್ಞದು ತನ್‌ಭಾಗ್ಯಂ
[ಸ್ತ್ರೀಯರು ಈ ಬಗೆ ಗುಂಪಾಗಿ ಬಂದು
ಅಸಂಬದ್ಧವ ನುಡಿವುದ ಕೇಳಿ
ನಾಚಿ ಕುಳಿತಿದ್ದ ದಶಕಂಠನಲ್ಲಿ
ಪ್ರಾಣವು ಪೋಗದೆ ಇದ್ದುದ್ದು ಭಾಗ್ಯ]

ಹೀಗೆ ಕಾರ್ತವೀರ್ಯಾರ್ಜುನನ ಕಾರಾಗೃಹದಲ್ಲಿ ರಾವಣ ಕೊಳೆಯುತ್ತ ಬಿದ್ದಿದ್ದ. ಅಷ್ಟರಲ್ಲಿ ರಾವಣನ ಮಂತ್ರಿ ಲಂಕೆಗೆ ಓಡಿ ಹೋಗಿ ಕಶ್ಯಪನಿಗೆ ನಡೆದ ಸಂಗತಿಯನ್ನೆಲ್ಲ ವಿವರಿಸಿದ. ಕಶ್ಯಪ ಕಾರ್ತವೀರ್ಯಾರ್ಜುನನಲ್ಲಿಗೆ ಬಂದು ಅವನನ್ನು ಪ್ರಾರ್ಥಿಸಿ ರಾವಣನನ್ನು ಬಿಡಿಸಿಕೊಂಡು ಲಂಕೆಗೆ ಕರೆದುಕೊಂಡು ಹೋಗುವ ಸ್ಥಿತಿಯನ್ನು ತಂದೊಡ್ಡಿಕೊಂಡ ರಾವಣನ ಚಿತ್ರವನ್ನು ನಂಬಿಯಾರರು ಕಾರ್ತವೀರ್ಯಾರ್ಜುನ ತುಳ್ಳಲ್ ಕಥನ ಕಾವ್ಯದಲ್ಲಿ ನೀಡಿರುವುದು.

ನಳ ಚರಿತಂ

ನಂಬಿಯಾರರು ಆರಿಸಿಕೊಂಡಿರುವ ಕಥೆಗಳು ಸಾಮಾನ್ಯವಾಗಿ ಪೌರಾಣಿಕ ಕಥೆಗಳು. ಆ ಕಥೆಗಳು ಸ್ವರ್ಗ, ಮರ್ತ್ಯ, ಪಾತಾಳ

— ಯಾವ ಲೋಕಕ್ಕೆ ಸಂಬಂಧಪಟ್ಟ ಕಥೆಗಳಾಗಿದ್ದರೂ ಕೇರಳದ ಯಾವುದಾದರೊಂದು ಭೂಭಾಗವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಕಥೆಗಳನ್ನು ಹೆಣೆಯುವುದು. ಹಾಗೆಯೇ ರಾಜರ ಕಥೆ ಬಂದಾಗ ಕೇರಳದ ರಾಜರು, ರಾಣಿಯರು, ಸೈನಿಕರು, ಪ್ರಜೆಗಳು — ಇವರನ್ನೆಲ್ಲ ಪೌರಾಣಿಕ ಕಥಾ ಪಾತ್ರಗಳೊಂದಿಗೆ ಸಮನ್ವಯಗೊಳಿಸುವ ದೃಷ್ಟಿ ಸಾಮಾನ್ಯವಾಗಿ ನಂಬಿಯಾರರ ಎಲ್ಲ ತುಳ್ಳಲ್ ಕಥನ ಕಾವ್ಯಗಳಲ್ಲೂ ಕಂಡು ಬರುತ್ತದೆ. ಇದರ ಜೊತೆಗೆ ಸಮಾಜದ ದೋಷಗಳನ್ನು ಪರಿಹಾಸದಿಂದ ತಿದ್ದುವುದು ನಂಬಿಯಾರರ ಮುಖ್ಯ ಗುರಿಯಾಗಿದ್ದಂತೆ ಕಂಡುಬರುತ್ತದೆ. ನಂಬಿಯಾರರ 'ನಳಚರಿತಂ' ತುಳ್ಳಲ್ ಕಥೆಯಲ್ಲಿ 'ಕೋಪವೆಂಬುದನರ್ಥ ಸಾಧನ'ವೆನ್ನುವ ತತ್ವವನ್ನು ಒಬ್ಬ ನಾಯರರ ಕಥೆಯ ಮೂಲಕ ಸ್ವಾರಸ್ಯವಾಗಿ ವಿವರಿಸಿದ್ದಾರೆ.

ನಳನ ಸಂದೇಶವನ್ನು ದಮಯಂತಿಗೆ ತಿಳಿಸಲು ಆಕಾಶವಲ್ಲಿ ಹಾರಿ ಹೋಗುತ್ತಿದ್ದ ಹಂಸಕ್ಕೆ ಭೂಮಿಯ ಮೇಲೆ ಒಬ್ಬ ನಾಯರ್ ಮನೆಯಲ್ಲಿ ನಡೆಯುತ್ತಿದ್ದ ಗಲಾಟೆ ಕೇಳಿಸಿತು. ಆಗ ಹಂಸ ಆ ಮನೆಯ ಅಂಗಳವಲ್ಲಿದ್ದ ತೆಂಗಿನ ಮರದ ಮೇಲೆ ಕುಳಿತು ಮನೆಯೊಳಗೆ ನಡೆಯುತ್ತಿದ್ದ ಗಲಾಟೆಯನ್ನು ಕೇಳಿಸಿಕೊಂಡಿತು.

ಮನೆಯಲ್ಲಿ ಹೆಂಡತಿ ಅಡುಗೆ ಮಾಡಿಟ್ಟಿರಲಿಲ್ಲವೆಂಬ ಕಾರಣಕ್ಕಾಗಿ ಸಿಟ್ಟುಗೊಂಡು ಒಬ್ಬ ನಾಯರ್ ಅಡಿಗೆ ಮನೆಯೊಳಕ್ಕೆ ಹೋಗಿ ನಡೆಸುವ ಅವಾಂತರಗಳನ್ನು ಹಂಸ ಕಂಡಿತು. ಅದನ್ನು ಕವಿ ವಿವರಿಸುವುದು ಹೀಗೆ :

'ನಾಯರ್ ವಿಶನ್ನು ವಲಞ್ಞುವರುಂಬೋಳ್
ಕಾಯ ಕಞ್ಞಿಕ್ಕರಿಯಿಟ್ಟಿಲ್ಲ

ಆಯುದುಕೇಟ್ಟು ಕಲಂಬಿಚೆನ್ನ
ಜ್ಞಾಯುಧಮೊಡನೆ ಕಾಟ್ಟಿಲೆರಿಞ್ಞು
ಚುಟ್ಟಿತಿಳಯ್ಕುಂವೆಳ್ಳ ಮುಶೇಷಂ
ಕುಟ್ಟಿಗಳ್ ತನ್ನುಡೆ ತಲಯಿಲೊಳಿಚ್ಚು
ಕೆಟ್ಟಿಯ ಪೆಣ್ಣನೆ ಮುಡಿಗೂಡಾದೆ
ಕಿಟ್ಟಿಯುವಡಿಗೊಂಡೆನ್ನು ಕಿಡಚ್ಚು
ಉರುಳಿಗಳ್ ಕಿಂಡಿಗಳೊಕ್ಕೆಯುಮುಡಚ್ಚು
ಉರುಲು ವಲಿಚ್ಚು ಕಿಣಟ್ಟಿಲ್ ಮುರಿಚ್ಚು
ಚಿರವಯುಡುತ್ತಥ ತೀಯಿಲೆರಿಚ್ಚು
ಅರಗಲ್ಲಜ್ಜು ಕುಳತ್ತಿಲೆರಿಞ್ಞು
ಅದುಕೊಂಡರಿಶಂತೀರಾಞ್ಞವನ
ಪ್ಪುರಯುಡೆ ಚುಟ್ಟುಂ ಮುಂಡಿನಡನ್ನು
ಅರಯನ್ನುಂ ಪುನರದು ಕಂಡುಡನೇ
ಹರಹರ! ಶಿವಶಿವಯೆನ್ನು ಪರಞ್ಞು'

[ಹಸಿದಿದ್ದ ನಾಯರು ಕುಸಿದು ಬಂದಾಗ
ಮನೆಯಲ್ಲಿ ಗಂಜಿಯು ಬೇಯಿಸಿಟ್ಟಿಲ್ಲ.
ಅದು ತಿಳಿದೊಡನೆ ಸಿಟ್ಟೇರಿಬಂತು
ಕೈಲಿದ್ದ ಆಯುಧವನ್ನಾಚೆಗೆಸೆದ.
ತಕಪಕ ಕುದಿಯುವ ನೀರನು ತನ್ನ
ಮಕ್ಕಳ ತಲೆಗೆ ತೆಗೆದೆತ್ತಿ ಸುರಿದ.
ಕೈ ಹಿಡಿದವಳನು ನಾಚಿಕೆಯಿಲ್ಲದೆ
ಸಿಕ್ಕಿದ ಬಡಿಗೆಯೊಳೊಂದನ್ನು ಬಿಗಿದ
ಕಾವಲಿ ಗಿಂಡಿಗಳನ್ನು ಪುಡಿಗೈದ,
ಒರಳ್ ಕಲ್ಲೆತ್ತಿ ಬಾವಿಯೊಳೆಸೆದ,
ತುರಿಯುವ ಮಣೆಯನ್ನು ಒಲೆಯೊಳಗಿಟ್ಟು
ಅರೆಯುವ ಕಲ್ಲನು ಕೊಳದೊಳಗೆಸೆದ.
ಆದರು ಅವನಿಗೆ ಕೋಪವುತೀರದೆ

ಓಡುತ ಮನೆಯನು ಬಳಸುತಲಿದ್ದ.
ಆ ನೋಟವನ್ನು ನೋಡಿದ ಕೂಡಲೆ
ಹರ ಹರ! ಶಿವ ಶಿವ ಎಂದಿತು ಹಂಸ.]

ಅಲ್ಲಿಂದ ಹೊರಟು ಹಂಸ ಹಾರುತ್ತಿದ್ದದ್ದು ಆಕಾಶದಲ್ಲಾದರೂ ಪ್ರಕೃತಿಯ ನಾನಾ ಮುಖಗಳ ವರ್ಣನೆ, ಜನಜೀವನದ ವೈವಿಧ್ಯತೆಗಳು, ದೇವಾಲಯಗಳು, ವಾದ್ಯಘೋಷಗಳು, ಉತ್ಸವಗಳು ಮುಂತಾದುವನ್ನೆಲ್ಲ ನೋಡುತ್ತಿತ್ತು ಎಂದು ಹಂಸವನ್ನು ಸಾಧನವಾಗಿಟ್ಟುಕೊಂಡು ನಂಬಿಯಾರರು ಹೃದಯಂಗಮವಾಗಿ ವರ್ಣಿಸಿದ್ದಾರೆ.

ನಳನ ಕಾಲಕ್ಕೂ, ನಾಯರರ ಕಾಲಕ್ಕೂ, ನಳನ ಕಥೆಗೂ ನಾಯರರ ಕಥೆಗೂ ಒಂದಕ್ಕೊಂದು ಸಂಬಂಧವಿಲ್ಲದಿದ್ದರೂ ಯಾವುದೋ ಸಂದೇಶ ಯಾವುದೊ ತತ್ತ್ವವನ್ನು ಪರಿಹಾಸದ ಮೂಲಕ ಉಪದೇಶಿಸುವ ಕಲಾ ನೈಪುಣ್ಯ ನಂಬಿಯಾರರಿಗಿತ್ತು. ಕೇವಲ ಜನರನ್ನು ನಗಿಸುವುದಲ್ಲ, ನಕ್ಕ ಜನರು ತಮ್ಮ ದೋಷಗಳನ್ನು ತಿದ್ದಿಕೊಂಡು, ತಮ್ಮ ದೌರ್ಬಲ್ಯಗಳನ್ನು ಹೋಗಲಾಡಿಸಿಕೊಂಡು ಸತ್ವಪೂರ್ಣ ಬದುಕಿನ ಕಡೆಗೆ ದೃಷ್ಟಿ ಹಾಯಿಸುವಂತೆ ಮಾಡಲು ನಂಬಿಯಾರರು ಪ್ರಯತ್ನಿಸಿದ್ದಾರೆನ್ನಬಹುದು.

ಬಾಲ್ಯುದ್ಭವಂ (ವಾಲಿಯ ಉದ್ಭವ)

ವೇದಗಳಲ್ಲಿ ಕಾಣಿಸಿಕೊಳ್ಳುವ ದೇವೇಂದ್ರ, ದೇವತೆಗಳ ಸಂರಕ್ಷಣೆಯ ಹೊರೆ ಹೊತ್ತವನು. ಭೂಮಿಯ ಮೇಲೆ ನಡೆಯುವ ಯಜ್ಞಯಾಗಾದಿಗಳ ಅಗ್ರಪೂಜೆಗೆ ಪಾತ್ರನಾದವನು. ದೇವತೆಗಳ ದೇವ; ಶತ್ರು ಸಂಹಾರಕ, ಭಜಿಸಿದವರ

ಅಭೀಷ್ಟಗಳನ್ನು ಈಡೇರಿಸಿಕೊಡುವವನು. ಆದರೆ ಪುರಾಣ ಕರ್ತೃಗಳು ದೇವೇಂದ್ರನ ಪಾತ್ರವನ್ನು ಅಷ್ಟು ಎತ್ತರದ ಪಾತ್ರವನ್ನಾಗಿ ಕಂಡಿಲ್ಲ. ಮಹತ್ವದ ಜೊತೆಗೆ ಸ್ವಾರ್ಥ, ವಂಚನೆ, ಕಾಮುಕತೆಗಳು ಕಂಡುಬರುವ ವ್ಯಕ್ತಿಯಾಗಿ ಚಿತ್ರಿತನಾಗಿದ್ದಾನೆ – ದೇವೇಂದ್ರ. 'ತ್ರಿಪುರದಹನಂ' 'ಅಹಲ್ಯಾ ಮೋಕ್ಷಂ', 'ಬಾಲ್ಯೋದ್ಭವಂ' ಮುಂತಾದ ತುಳ್ಳಲ್ ಕಥಾ ರಚನೆಯಲ್ಲಿ ನಂಬಿಯಾರರು ತಮಗಿಂತ ಹಿಂದಿನ ಪುರಾಣಕರ್ತೃಗಳ ದೃಷ್ಟಿಯಲ್ಲೇ ದೇವೇಂದ್ರನನ್ನು ನೋಡಿರುವುದು. ಬಾಲ್ಯೋದ್ಭವದಲ್ಲಿ ನಂಬಿಯಾರರು ನೀಡಿರುವ ಇಂದ್ರನ ಪಾತ್ರ ಚಿತ್ರಣವನ್ನು ಗಮನಿಸಬಹುದು.

ಹಿಂದೆ ಒಂದು ಸಲ ದೇವೇಂದ್ರ ತನ್ನ ಶಚಿ ಮತ್ತು ಅಂತಃಪುರದ ಇತರ ಸುಂದರಿಯರೊಡನೆ ನಂದನವನದಲ್ಲಿ ಸಂತೋಷದಿಂದ ಕಾಲಕಳೆಯುತ್ತಿದ್ದ. ಆ ಸಂದರ್ಭದಲ್ಲಿ ಅಲ್ಲಿದ್ದ ಸುಂದರಿಯರೊಡನೆ ಇಂದು ನಮ್ಮ ನೃತ್ಯಶಾಲೆಯಲ್ಲಿ ಒಂದು ನಾಟಕವನ್ನು ಏರ್ಪಡಿಸಬೇಕೆಂದು ಹೇಳಿದ :

'ಉರ್ವಶೀ ಮೇನಕೇ ರಂಭೇ ತಿಲೋತ್ತಮೇ
ನಿರ್ವಹಿಚ್ಚೀಡೇಣಂ ಮಿನ್ನೊರು ನಾಟಕಂ
ಲಕ್ಷ್ಮೀಸ್ವಯಂವರಮೆನ್ನುಳ್ಳ ನಾಟಕಂ
ವೀಕ್ಷಣಂ ಚೆಯ್ವಾನ್ ನಮುಕ್ಕುಂಡು ಕೌತುಕಂ'

[ಊರ್ವಶಿ ಮೇನಕೆ ರಂಭೆ ತಿಲೋತ್ತಮೆ
ಆಡಬೇಕೊಂದು ನಾಟಕವನ್ನು
ಲಕ್ಷ್ಮೀ ಸ್ವಯಂವರವೆನ್ನುವ ನಾಟಕ
ವೀಕ್ಷಿಸಬೇಕೆಂಬ ಆಸೆಯುಂಟೆನಗೆ]

"ಆ ನಾಟಕ ವಿಶಿಷ್ಟವಾಗಿರಬೇಕು. ನಿಮ್ಮ ಅಭಿನಯ ಕೌಶಲ ವಷ್ಟೂ ಅಭಿವ್ಯಕ್ತವಾಗಬೇಕು.

'ಸರ್ವರಸಂಗಳುಂ ಸರ್ವ ತಾಳಂಗಳುಂ
ಸರ್ವ ಮೇಳಂಗಳುಂ ಸರ್ವಗೀತಂಗಳುಂ
ಸರ್ವ ವೇಷಂಗಳುಂ ಸರ್ವ ಘೋಷಂಗಳುಂ'

ಉಳ್ಳಂತಹ ನಾಟಕವನ್ನು ನೀವಿಂದು ಅಭಿನಯಿಸಬೇಕು. ಗಂಡಸರು ಯಾರಾದರೂ ಇಲ್ಲಿದ್ದ ಪಕ್ಷದಲ್ಲಿ ನೀವು ನಾಚುತ್ತೀರಲ್ಲವೆ? ಅದಕ್ಕಾಗಿ ಈ ನಾಟಕ ಮುಗಿಯುವವರೆಗೆ ಗಂಡಸರಾರನ್ನೂ ಇಲ್ಲಿಗೆ ಬಿಡದಂತೆ ಕಾವಲುಗಾರರಿಗೆ ಅಪ್ಪಣೆ ಮಾಡುತ್ತೇನೆ" ಎಂದು ಹೇಳಿ ಅದರಂತೆ ಅಪ್ಪಣೆ ಮಾಡಿದ್ದೂ ಆಯಿತು. ಅಪ್ಸರೆಯರು ಲಕ್ಷ್ಮೀ ಸ್ವಯಂವರದ ಪಾತ್ರಗಳ ವೇಷಗಳನ್ನು ಧರಿಸಿ ಅಲಂಕರಿಸಿಕೊಂಡು ಬಂದರು.

ವಿವಿಧ ರಾಗಗಳಲ್ಲಿ ಸಂಗೀತ ಕೇಳಿಬರತೊಡಗಿತು. ನಾನಾ ರಾಗಗಳಲ್ಲಿ ಹಾಡತೊಡಗಿದ್ದರು. ತೋಡಿ, ಕಲ್ಯಾಣಿ, ಶಂಕರಾಭರಣ* ಮೊದಲಾದ ಎಷ್ಟು ರಾಗಗಳಿವೆಯೋ ಅವುಗಳಲ್ಲೆಲ್ಲ ಹಾಡಿ ಎಷ್ಟು ತಾಳಗಳಿವೆಯೋ ಅವುಗಳನ್ನೆಲ್ಲ ನುಡಿಸುತ್ತಿದ್ದರು.

ಹೀಗೆ ಇಂದ್ರಪುರದಲ್ಲಿ ಲಕ್ಷ್ಮೀಸ್ವಯಂವರ ನಾಟಕ ಪ್ರಾರಂಭವಾಗಿತ್ತು. ಆ ಸಮಯದಲ್ಲಿ ಸೂರ್ಯನ ಸಾರಥಿ ಅರುಣ ಸೂರ್ಯದೇವನಿಗೆ ನಮಸ್ಕರಿಸಿ "ದೇವಾ, ಈಗ ಇಂದ್ರನ ನಗರದಲ್ಲಿ ನಾಟಕ ನಡೆಯುತ್ತಿದೆ. ರಾಗ, ತಾಳಗಳ, ಪಕ್ಕವಾದ್ಯಗಳ

---

*ಇಲ್ಲಿ ಸಂಗೀತದ ಎಲ್ಲ ರಾಗಗಳ ದೀರ್ಘವಾದ ಪಟ್ಟಿಯನು ನಂಬಿಯಾರರು ಕೊಟ್ಟಿದ್ದಾರೆ

ಶಬ್ದ ಕೇಳಿಬರುತ್ತಿದೆ. ನನಗೆ ಆ ನಾಟಕವನ್ನು ನೋಡುವ ಆಶೆ ಅತಿಯಾಗಿದೆ. ಅಲ್ಲಿಗೆ ಹೋಗಿ ಆ ನಾಟಕವನ್ನು ನೋಡಿಕೊಂಡು ಬರುವುದಕ್ಕೆ ಸೂರ್ಯದೇವನು ಅನುಮತಿಯನ್ನು ನೀಡಬೇಕು" ಎಂದು ಪ್ರಾರ್ಥಿಸಿದ. ಅರುಣನ ಪ್ರಾರ್ಥನೆಗೆ ಸೂರ್ಯದೇವನು ಕೊಡುವ ಉತ್ತರ ಇದು :

'ನನ್ನಲ್ಲದೆನ್ನಿಕ್ಕನ್ನು ತೋನ್ನೀಡುನ್ನು
ಪೆಣ್ಣುಙ್ಙಳೆ ನಲ್ಲವೇಷವು ಕಂಡು ನೀ
ಕಣ್ಣುಮಿಳಿಚ್ಚಙ್ಙು ನಿನ್ನು ಪೋಯಾಲಹೋ
ದಂಡಮಾಯ್‌ತೀರು ಮೆನಿಕ್ಕೆನ್ನರಿಞ್ಞು ನೀ
ತಿಣ್ಣೆನ್ನು ವೇಗಂ ವರಿಗೆಡೋ ಸಾರಥೇ'
[ಒಳ್ಳೆಯದಲ್ಲವೆಂದೆನಗೆ ಅನ್ನಿಸುತಿದೆ
ಹೆಣ್ಣುಗಳೊಳ್ಳೆಯ ವೇಷವ ಕಂಡು ನೀ
ಕಣ್ಣುಮಿಳಿಗುಟ್ಟುತ್ತ ನಿಂತೇ ಬಿಟ್ಟರೆ
ನನಗಿಲ್ಲಿ ಕಷ್ಟವಾದೀತಲ್ಲವೇನೋ
ತಡವನ್ನು ಮಾಡದೆ ಬೇಗಬಾ ಸಾರಥಿ]

ಬೇಗ ಹೋಗಿ ಬೇಗ ಬರುತ್ತೇನೆ ಎಂದು ಸೂರ್ಯದೇವನಿಗೆ ಆಶ್ವಾಸನೆ ಕೊಟ್ಟು ಅರುಣ, ಇಂದ್ರನಗರಿಗೆ ಬಂದ. ನೃತ್ಯಶಾಲೆಯೊಳಕ್ಕೆ ಮೆಲ್ಲಗೆ ಪ್ರವೇಶಿಸುತ್ತಿದ್ದಾಗ ಕಾವಲಿನವರು ತಡೆದು "ಪುರುಷರಿಗೆ ಪ್ರವೇಶವಿಲ್ಲ; ಸ್ತ್ರೀಯರಿಗೆ ಮಾತ್ರ" ಎಂದು ನಿಲ್ಲಿಸಿದರು. ನಿರಾಶನಾಗಿ ಸ್ವಲ್ಪ ದೂರ ಹಿಂದಕ್ಕೆ ಬಂದು, ರಂಭೆ, ಊರ್ವಶಿ, ಮೇನಕೆ, ತಿಲೋತ್ತಮೆ – ಮುಂತಾದವರೆಲ್ಲರನ್ನೂ ಮೀರಿಸುವಂತಹ ಸುಂದರ ಸ್ತ್ರೀರೂಪಿನಿಂದ ನೃತ್ಯಶಾಲೆಯ ಬಾಗಿಲಿಗೆ ಬಂದ. ಒಳಗೆ ಪ್ರವೇಶ ದೊರೆಯಿತು.

ನೃತ್ಯಶಾಲೆಗೆ ಪ್ರವೇಶಿಸಿದ ಸ್ತ್ರೀಯನ್ನು ಕಂಡ ಒಡನೆಯೇ ದೇವೇಂದ್ರ ಅವಳಿಗೆ ಮನಸೋತ.

'ಮುಟ್ಟುಳ್ಳ ಕಾಳ್ಚಗಳೆಲ್ಲಾ ಮುಪೇಕ್ಷಿಚ್ಚು
ಮುಟ್ಟಂ ಮಹೇಂದ್ರನ್ಡೆ ಕಣ್ಣುಗಳೊಕ್ಕಯುಂ
ತೆಟ್ಟೆನ್ನವಡೆ ಶರೀರತ್ತಿಲಂಜಸಾ
ಪಟ್ಟಿ ಪಲತರ ಕಾಂಕ್ಷ ವರ್ಧಿಕ್ಕಯಾಲ್
ಕೇಶಾದಿ ಪಾದವುಂ ಪಾದಾದಿ ಕೇಶವುಂ
ವೇಶ್ಯಾಂಗನಾಮಣಿಯಾಳೆ ಕಟಾಕ್ಷಿಚ್ಚು
ಕಾಲದೇಶಾವಸ್ಥ ಮೂನ್ನು ಮರನ್ನುಡನ್'

[ಮುತ್ತಿನ ನೋಟಗಳನ್ನು ಕೈಬಿಟ್ಟು
ಒಟ್ಟಾಗಿ ಇಂದ್ರನ ಕಣ್ಣುಗಳೆಲ್ಲವು
ತಪ್ಪದೆ ಅವಳ ಶರೀರದಿ ನೆಟ್ಟುವು
ನಾನಾರೀತಿಯ ಕಾಂಕ್ಷೆಗಳಿಂದಲಿ
ಅಡಿಯಿಂದ ಮುಡಿವರೆಗೆ ಮುಡಿಯಿಂದ ಅಡಿವರೆಗೆ
ವೇಶ್ಯಾಂಗನೆಯನೆ ನೋಡುತಲಿದ್ದ
ದೇಶ ಕಾಲಾವಸ್ಥೆ ಮೂರನು ಮರೆತ.]

ನಡೆಯುತ್ತಿದ್ದ ನಾಟಕ ನೋಡುವುದನ್ನು ಬಿಟ್ಟ. ತಾನೆಂದೂ ಯಾವ ಲೋಕದಲ್ಲೂ ಕಾಣದಿದ್ದ ಅನುಪಮ ಸುಂದರಿಯಾದ ಆಕೆಯನ್ನೇ ನೋಡುತ್ತಿದ್ದ ನಾಟಕವನ್ನು ನಿಲ್ಲಿಸುವಂತೆ ಹೇಳಿದ. "ಇಷ್ಟುಹೊತ್ತು ಅಭಿನಯಿಸಿ ತುಂಬ ಬಳಲಿದ್ದೀರಿ. ಉಳಿದ ಭಾಗವನ್ನು ನಾಳೆಯೋ ಅಥವಾ ಮತ್ತೆ ಯಾವಾಗಲಾದರೋ ಅಭಿನಯಿಸಿದರಾಯಿತು. ಎಲ್ಲರೂ ಹೋಗಿ" ಎಂದ. ನಾಟಕ ನೋಡುತ್ತಿರುವಷ್ಟರಲ್ಲಿ ನಾಟಕ ನಿಂತಿತು. ನಿರಾಶೆಯಿಂದ ಹಿಂದಿರುಗುತ್ತಿದ್ದ ಸ್ತ್ರೀ ವೇಷದ ಅರುಣನ ಬಳಿಗೆ ದೇವೇಂದ್ರ ಬಂದ.

'ನಾರಿಶಿರೋಮಣಿ ಮಾಲಿಕೇಬಾಲಿಕೇ
ಆರೋಮಲೇ ಗಜಗಾಮಿನಿ ಕಾಮಿನೀ
ಆರು ನೀಯೆನ್ನು ಪರಗೆಡೋ ಮೈಗಾದೆ
ಚೇರುವಾನಾಗ್ರಹಂ ಪಾರಂ ನಮುಕ್ಕೆಡೋ!
ನಿರ್ಣಯಂ ನಿನ್ನೆಲಭಿಚ್ಚೀಂಗಿಲ್ ಮಟ್ಟುಳ್ಳ
ಪೆಣ್ಣುಙ್ಙಳೊನ್ನು ನಮುಕ್ಕಿನ್ನು ವೇಂಡೆಡೋ
ಸುಂದರಿ ನೀ ಎನ್ನರಿಗಿಲ್ ವಂಗೆಡೋ'
[ನಾರಿ ಶಿರೋಮಣಿ ಮಾಲಿಕೇ ಬಾಲಿಕೇ
ಪ್ರಿಯತಮೆ ಗಜಗಾಮಿನೀ ಕಾಮಿನೀ
ಆರು ನೀನೆಂಬುದ ಹೇಳಿಲೆ ಬೇಗದಿ
ಬೆರೆಯುವ ಆಗ್ರಹ ಪೆನಗತಿಯಾಗಿದೆ
ಅರ್ಣಜಲೋಚನೆ ನಿನ್ನನ್ನು ನೋಡಲು
ಕಣ್ಣುಗಳೆನ್ನೂ ಸಾಲವು ನನಗೆಲೆ
ನೀನೆನಗಾದರೆ ಮರೆವೆನು ಮತ್ತಿನ
ಹೆಣ್ಣುಗಳೊಂದೂ ನನಗಿನ್ನು ಬೇಡ
ಸುಂದರಿ ಬಾರೆಲೆ ನೀನೆನ್ನ ಬಳಿಗೆ]

ಕಾಮ ಪೀಡಿತನಾದ ಇಂದ್ರ ಅವಳನ್ನು ಹತ್ತಿರ ಬಂದು ಕುಳಿತುಕೊಳ್ಳುವಂತೆ ಕರೆದಾಗ ಆಕೆ ಹೇಳುತ್ತಾಳೆ:

'ಅಯ್ಯೋ! ಸುರೇಶ್ವರ! ಚೊಲ್ಲರುದಿಙ್ಙನೆ
ಪೊಯ್ಯಲ್ಲ ಞಾನೊರು ನಾರೀಮಣಿಯಲ್ಲ
ಸೂರ್ಯನ್ಟೆ ಸೂತನರುಣನ್ ಕೃಪಾನಿಧೇ'
[ಅಯ್ಯೋ ಸುರೇಶ್ವರ ಹೇಳದಿರೀಬಗೆ
ಸುಳ್ಳಲ್ಲಿದುನಾನು ನಾರೀಮಣಿಯಲ್ಲ
ಸೂರ್ಯನ ಸಾರಥಿ ಅರುಣನು ಸ್ವಾಮಿ]

ಸೂರ್ಯ ಸಾರಥಿ ತಾನು ಎಂದು ಬಗೆ ಬಗೆಯಲ್ಲಿ ಬೇಡಿ ಕೊಂಡರೂ ಇಂದ್ರ ಆಕೆಯೊಡನೆ ರತಿಕೇಳಿಯನ್ನು ನಡೆಸಿದ್ದರ

ಫಲವಾಗಿ ಒಂದು ಗಂಡು ಮಗು ಹುಟ್ಟಿತು. ಆ ಮಗುವನ್ನು ಏನುಮಾಡುವುದೆಂದು ಆಕೆ ಕೇಳಿದಾಗ ಇಂದ್ರ :

'ಎನ್ನುಡೆ ಪುತ್ರನೆ ಕೊಂಡುಚೆನ್ನಾಶುನೀ
ಧನ್ಯಯಾಯುಳ್ಳೋರಹಲ್ಯಯ್ಕ್ಕು ನಲ್ಗುಗ
ಗೌತಮ ಪತ್ನಿಯಾಂ ತಾಪಸಿಯೆನ್ನುಡೆ
ದಾರಕನ್ ತನ್ನೆವಳತ್ರ್ಗಂಕೊಳ್ಳುಂದೃಢಂ'

[ನನ್ನ ಮಗನನ್ನು ಕೊಂಡು ಹೋಗೀಗ
ಧನ್ಯೆ ಅಹಲ್ಯೆಯ ಕೈಲಿರಿಸು ಬೇಗ
ಗೌತಮಪತ್ನಿ ತಪಸ್ವಿನಿ ನನ್ನ
ಸುತನನ್ನು ಸಲಹಿಕೊಳುವಳುನನ್ನಿ]

ಎಂದು ಹೇಳಿದುದನ್ನು ಕೇಳಿ ಅರುಣ ನಿಜವೇಷದಲ್ಲಿ ಆ ಮಗುವನೆತ್ತಿಕೊಂಡು ಗೌತಮನ ಆಶ್ರಮಕ್ಕೆ ಬಂದ.

'ಕಲ್ಯೇ ಪಿತುಲ್ಯೇ ವಿಶಲ್ಯೇಯಹಲ್ಯೇ
ಕಲ್ಯಾಣೆ ನೀಯೆನ್ಟೆ ವಾಕ್ಕು ಕೇಟ್ಟೀಡಣಂ
ಮಲ್ಲಾರಿ ಪೂರ್ವಜನ್ ತನ್ಟೆ ಮಗನೆ ನೀ
ಉಲ್ಲಾಸಮೋಡುವಳತ್ರ್ಗ ರಕ್ಷಿಕ್ಕಣಂ'

[ಕಲ್ಯೇ ಪಿತುಲ್ಯೇ ವಿಶಲ್ಯೇ ಯಹಲ್ಯೇ
ಕಲ್ಯಾಣಿ ನೀನೆನ್ನ ಮಾತ ಕೇಳಮ್ಮ
ಮಲ್ಲಾರಿ ಪೂರ್ವಜ ಸುತನನ್ನು ನೀನು
ಉಲ್ಲಾಸದಿಂದಲಿ ಸಾಕಿಕೊಳಬೇಕು.]

ಆ ಮಾತನ್ನು ಕೇಳಿದ ಅಹಲ್ಯೆಗೆ ಅತೀವವಾದ ಸಂತೋಷ ವುಂಟಾಗಿ

'ತನ್ನಾಲು ಮಜ್ಜು ನೀ ದೇವೇಂದ್ರ ಪುತ್ರನೆ
ಪೋಯಾಲುಮಜ್ಜು ನೀ ಪಕ್ಷೀಂದ್ರ ಪೂರ್ವಜಾ'
[ತಾರಯ್ಯ ನೀ ದೇವೇಂದ್ರಪುತ್ರನ
ಹೋಗಯ್ಯ ನೀನಿನ್ನು ಗರುಡನಗ್ರಜ]

ಎಂದು ಆ ಮಗುವನ್ನು ಕೈಗೆತ್ತಿಕೊಂಡಳು.

ಅರುಣ ಸೂರ್ಯಲೋಕಕ್ಕೆ ಹಿಂದಿರುಗಿದಾಗ, ಅರುಣ ತಡ ಮಾಡಿ ಬಂದುದ್ದನ್ನು ಕಂಡು ಸೂರ್ಯನಿಗೆ ಸಹಿಸಲಾರದಷ್ಟು ಕೋಪವುಂಟಾಗಿತ್ತು. "ನೀನು ಹೇಳಿದ ಹೊತ್ತಿಗೆ ಬಂದೆಯಾ ?" ಎಂದು ಸೂರ್ಯ ಗರ್ಜಿಸಿದಾಗ ಅರುಣ :

'ಸ್ವಾಮಿನ್ ! ಪ್ರಸಾದಿಚ್ಚು ಕೇಟ್ಟಿರುಳೇಣಮೇ
ತಾಮಸತ್ತಿನುಳ್ಳ ಕಾರಣ ಮೊಕ್ಕೆಯುಂ'
[ಸ್ವಾಮಿಾ ದಯವಿಟ್ಟು ಕೇಳಿಸಿಕೊಳ್ಳಿ
ತಡವಾದ ಕಾರಣವೇನೆಂಬುದನ್ನು]

ಎಂದು ನಡೆದುದ್ದನ್ನೆಲ್ಲ ವಿವರಿಸಿ ತನ್ನನ್ನು ಕ್ಷಮಿಸುವಂತೆ ಪ್ರಾರ್ಥಿಸಿದ.

ಅರುಣ ಹೇಳಿದುದನ್ನೆಲ್ಲ ತದೇಕಚಿತ್ತನಾಗಿ ಕೇಳಿದ ಸೂರ್ಯ ದೇವನಿಗೆ ಅರುಣ ಪಲ್ಲಟಿಸಿಕೊಂಡು ಹೋಗಿದ್ದ ಸ್ತ್ರೀವೇಷ ವನ್ನೊಮ್ಮೆ ಕಣ್ಣು ತುಂಬ ನೋಡಬೇಕು ಎನ್ನಿಸಿತು. ಸ್ತ್ರೀ ಸೌಂದರ್ಯದ ನಿಧಿಗಳೋ ಎನ್ನುವಂತಿರುವ ರಂಭೆ, ಮೇನಕೆ, ತಿಲೋತ್ತಮೆ, ಊರ್ವಶಿ ಮುಂತಾದವರ ರೂಪಶ್ರೀಯನ್ನೂ ಮಾರಿಸುವ ಸೌಂದರ್ಯ ಸಾಧಾರಣವಾದದ್ದೇನು ? ಸೂರ್ಯ ಅರುಣನೊಡನೆ :

'ಕಾಶ್ಯಪಪುತ್ರನಾಯುಳ್ಳೊರು ನೀನಲ್ಲ
ವೇಶ್ಯಯಾರ್ಯವನ್ನು ಮಹೇಂದ್ರನುಂ ತಂಗಳಿಲ್
ಚೇರ್ವಯುಂಡಾಯೊರು ಪುತ್ರನುಂಡಾಗಯಾಲ್
ಆಶ್ಚರ್ಯಸೌಭಾಗ್ಯ ಸೌಂದರ್ಯಮೇರಿಯ
ಮಂಗಲವೇಷಂ ನಮುಕ್ಕಿನ್ನು ಕಾಣುವಾನ್
ಸಂಗತಿ ಕೂಟ್ಟುವಾನೊಟ್ಟುಂ ಮಡಿಕ್ಕೇಂಡ
ಸಂಗಮುಂ ವೇಣ ಮೆನ್ನಿಲ್ಲಿಡೋ ಸಾರಥೇ
ಶೃಂಗಾರಭಾವ ರಸಂಙ್ಙಳ್ ಕಂಡಾಲ್ ಮದಿ'

[ಕಾಶ್ಯಪಪುತ್ರನೆಂಬುದೆ ಅಲ್ಲ
ವೇಶ್ಯೆಯ ರೂಪಿಗೆ ಇಂದ್ರನು ಕೂಡ
ಬೆರೆತಾಗ ಮಗನು ಜನಿಸಿದನೆಂದರೆ
ಆಚ್ಚರಿ ಸೌಭಾಗ್ಯ ಸುಂದರವತಿಶಯ
ಮಂಗಳ ರೂಪನ್ನು ಕಾಣಬೇಕಿಂದು
ಈ ಮಾತು ಕೇಳಿ ನೀ ನಾಚಬೇಡ
ಸಂಗಮ ಬೇಕೆಂದಿಲ್ಲವೊ ಸಾರಥಿ
ಶೃಂಗಾರ ರಸಗಳ ಕಂಡರೆ ಸಾಕು.]

ಎಂದು ಹೇಳಿದ ಸೂರ್ಯದೇವನ ಮಾತನ್ನು ಕೇಳಿದ ಸಾರಥಿ ಬೆಚ್ಚಿಬಿದ್ದ. ಇಂದ್ರನಂತೆಯೇ ಸೂರ್ಯದೇವನೂ ತನಗೆ ವಶನಾಗುವುದು ಖಂಡಿತ ಎಂದು ಭಾವಿಸಿ "ಸ್ವಾಮಿ, ಈ ಕೆಲಸಕ್ಕೆ ನನ್ನನ್ನು ಒತ್ತಾಯಿಸಬೇಡಿ" ಎಂದು ಪ್ರಾರ್ಥಿಸಿಕೊಂಡ.

ಆಗ ಸೂರ್ಯದೇವ ಹೇಳಿದ :

"ಈ ಸೂರ್ಯದೇವ ಎಂದಾದರೂ ವಿವೇಕ ಹೀನನಾದಾನೆ? ಚಂಚಲಾಕ್ಷಿಯರ ಕಡೆಗಣ್ಣಿನ ನೋಟಕ್ಕೆ ವಶನಾದದ್ದುಂಟೆ ? ಅಂತಹ ಪ್ರಮಾದವೇನೂ ಈ ಲೋಕದ ಕಣ್ಣಾದ ಸೂರ್ಯದೇವನಿಂದ ಸಂಭವಿಸಲಾರದು. ನೀನು ಹೋಗಿ ಸ್ತ್ರೀರೂಪ ಧರಿಸಿ ಬಾ" ಎಂದು ಕಳುಹಿಸಿದ.

ಅರುಣ ಸ್ತ್ರೀ ವೇಷದಲ್ಲಿ ಬಂದಾಗ ಸೂರ್ಯ ತನ್ನ ಕಣ್ಣನ್ನು ತಾನೇ ನಂಬದಂತಾದ.

"ನಿನ್ನ ರೂಪವನ್ನು ನೋಡಿದ್ದಾಯಿತು. ಹತ್ತಿರ ಬಾ."
ಎಂದು ಹೇಳುತ್ತಾ ತಾನೇ ಅವಳ ಹತ್ತಿರಕ್ಕೆ ಬಂದು

'ಗುಣಮುಡಯೊರು ತರುಣಿ ಶಿರೋಮಣಿ ತರಿಗ ತವಾಧರಬಿಂಬಂ
ಪಣಮನವಧಿಪಟ್ಟುಂ ಪುಡವಗಳ್ ಪಲವಗ ಕೋಪ್ಪುಗಳೆಲ್ಲಾಂ
ಪ್ರಣಯಿನಿ ತವತರುವದಿನಿನ್ನೊರು ಸಂಶಯಮಿಲ್ಲ ಸುಶೀಲೆ'

[ಗುಣವುಳ್ಳ ತರುಣಿಯೆ ತಾರೆಲೆ ನಿನ್ನ ಅಧರ ಬಿಂಬಗಳನ್ನು
ಅತ್ಯಧಿಕ ಧನವಸ್ತ್ರ ಬಲುಬಗೆ ಆಭರಣಾದಿಗಳನ್ನು
ಪ್ರಣಯಿಸಿ ಕೊಡುವೆ ಬೇಡಿದುದನ್ನು ಸಂಶಯಬೇಡ ಸುಶೀಲೆ]

ಎಂದು ಹೇಳಿ ಕಾಮಪರವಶನಾದ ಸೂರ್ಯದೇವ ತಾನು ಹಿಂದೆ ಆಡಿದ ಮಾತೆಲ್ಲವನ್ನೂ ಮರೆತು

'ಅನುಪಮ ಗುಣಮುಡಯ ವಿಲಾಸಿನಿಮಣಿಯುಡೆ ಪಾಣಿಪಿಡಿಚ್ಚು'
[ಅನುಪಮಗುಣಮಣಿಯುಳ ಕೈಹಿಡಿದ]

ಆ ಬಳಿಕ ಇಂದ್ರನ ನಾಟ್ಯಶಾಲೆಯಲ್ಲಿ ಏನಾಯಿತೋ ಅದೇ ಇಲ್ಲೂ ಆದದ್ದು. ಒಂದು ಗಂಡು ಮಗು ಜನಿಸಿತು. ಸರಿ ಇದನ್ನು ಅಹಲ್ಯೆಯ ಕೈಯಲ್ಲಿ ಕೊಟ್ಟು ಬಾ ಎಂದು ಸೂರ್ಯ ದೇವ ಕಳುಹಿಸಿದ. ಅಹಲ್ಯೆ ಆ ಮಗುವನ್ನೂ ಪ್ರೀತಿಯಿಂದ ಸಾಕುತ್ತಿದ್ದಳು.

ಗೌತಮ ಮುನಿ ತಪಸ್ಸಿನಿಂದ ಕಣ್ಣು ತೆರೆದಾಗ ಕುಡಿಯಲು ಹಾಲಿಲ್ಲದೆ ಎಲುಬು ಚರ್ಮ ಮಾತ್ರವಾಗಿದ್ದ ಆ ಎರಡು ಮಕ್ಕಳನ್ನು ಅಹಲ್ಯೆ ತನ್ನ ಸೊಂಟದ ಮೇಲೆತ್ತಿಕೊಂಡು

ತಿರುಗಾಡಿಕೊಂಡಿದ್ದುದನ್ನು ನೋಡಿದ. 'ಇವು ಮರ್ಕಟ ಶಿಶುಗಳಾಗಲಿ' ಎಂದು ಶಪಿಸಿದ.

ಆ ಮರ್ಕಟ ಶಿಶುಗಳೇ ವಾಲಿ ಸುಗ್ರೀವರು. ಆ ಮಕ್ಕಳು ಮರ್ಕಟಗಳಾಗಿ ಮರದಿಂದ ಮರಕ್ಕೆ ಛಂಗನೆ ನೆಗೆದಾಡಿಕೊಂಡಿದ್ದ ವಿಷಯ ದೇವೇಂದ್ರನಿಗೆ ತಿಳಿಯಿತು. ಚಿತ್ರಸೇನನೆಂಬ ಗಂಧರ್ವನನ್ನು ಕರೆದು ದೇವೇಂದ್ರ ಗುಟ್ಟಾಗಿ ಹೇಳಿದ—"ಧಾತ್ರಿಯಲ್ಲಿ ನನ್ನ ಮತ್ತು ಸೂರ್ಯದೇವನ ಎರಡು ಮಕ್ಕಳು ಮರ್ಕಟಗಳಾಗಿ ಗೌತಮನ ಆಶ್ರಮದಲ್ಲಿವೆ. ಅವುಗಳನ್ನು ರಾತ್ರಿಯಲ್ಲಿ ಹೋಗಿ ಯಾರಿಗೂ ತಿಳಿಯದಂತೆ ಇಲ್ಲಿಗೆ ಕರೆದು ತಾ" ಎಂದು ಹೇಳಿ ಕಳುಹಿಸಿದ. ಅದೇ ರೀತಿ ಆ ಮಕ್ಕಳನ್ನು ತಂದು ಇಂದ್ರನಿಗೊಪ್ಪಿಸಿದ. ಮಕ್ಕಳು ಬೆಳೆಯುತ್ತಿದ್ದರು.

ಕಿಷ್ಕಿಂಧೆಯನ್ನಾಳುತ್ತಿದ್ದ ಋಕ್ಷರಜಸ್ಸು ಎನ್ನುವ ವಾನರ ರಾಜನಿಗೆ ಮಕ್ಕಳಿರಲಿಲ್ಲ. ಅವನು ದೇವೇಂದ್ರನಿಂದ ಈ ಮಕ್ಕಳನ್ನು ಬೇಡಿ ಪಡೆದು ಕಿಷ್ಕಿಂಧೆಗೆ ಕರೆತಂದ. ಅವರೇ ವೀರರಾದ ವಾಲಿ ಸುಗ್ರೀವರು.

○ ○ ○

ತಾರಕಾಸುರನ ಸಂಹಾರವಾದ ನಂತರ ಅವನ ಮೂವರು ಮಕ್ಕಳು ಬ್ರಹ್ಮನನ್ನು ಕುರಿತು ತಪಸ್ಸುಮಾಡಿ ತ್ರಿಪುರಗಳಿಗೆ ಒಡೆಯರಾದರು. ಆಗ ಅವರು ದೇವೇಂದ್ರನ ಕುತಂತ್ರ ಮತ್ತು ಸ್ವಾರ್ಥನೀತಿಯನ್ನು ಕುರಿತು ಆಡುವ ಮಾತುಗಳು:

"ನಮ್ಮ ತಂದೆಯನ್ನು ಶಿವ ಕೊಲ್ಲಬೇಕೆಂದಿದ್ದನೆ? ದೇವತೆಗಳು ಹೂಡಿದ ತಂತ್ರ ಅದು. ಹೆಚ್ಚಾಗಿ ದೇವೇಂದ್ರನದು.

'ಸನ್ಯಾಸಿಚ್ಚ ಭಗವಾನೆಕೊಂಡು ವೇಳಿ ಕಳಿಪ್ಪಿಚ್ಚು

[ಸನ್ಯಾಸಿಯಾದ ಶಿವನಿಗೆ ಮದುವೆಯನ್ನು ಮಾಡಿಸಿದರು.]

ದಂದ ಶೂಕಾಧಿಪನಾಯ ವಾಸುಕಿಯೆಕ್ಕಯರಾಕ್ಕಿ
ಮಂದರಪರ್ವತತ್ತೇಯುಂ ಮಂದುಮಾಕ್ಕೀಟ್ಟನ್ನೊರುನಾಳ್
ಪಾಲ್ಕಡಲಿನ್ ನಡುವಿಲಿಟ್ಟಾಕ್ಕಮೋಡೇವಲಿಚ್ಚಪ್ಪೋಳ್
ವೆಕ್ಕಮೋರೋ ಪದಾರ್ಥಂಗಳದಿಲ್ ನಿನ್ನುದ್ಭವಿಚ್ಚು
ಕಲ್ಪವೃಕ್ಷಂಗಳುಂಡಾಯಿ ನಲ್ಲಪೆಣ್ಣುಂಗಳುಂಡಾಯಿ
ಶಿಲ್ಪಮೋಡೆ ನಾಲುಕೊಂಬುಳ್ಳಾನೆಯುಂವನ್ನಾರುವಾಜ್ಞಿ
ಇತ್ತರ ನಲ್ಲವಸ್ತುಗಳ್ ವಾನವನ್ಮಾರ್ ಕೈಕ್ಕಲಾಕ್ಕಿ
ಅತ್ರಮಾತ್ರಮೊನ್ನು ಪೋಲುಂ ಮಿಜ್ಜನತ್ತಿನ್ನುತನ್ನಿಲ್ಲ
ಶಂಕರನ್ನುಮದಿಲೊನ್ನುಂಕೊಡುತ್ತಿಲ್ಲೆನ್ನದೇಯುಲ್ಲ
ಶಂಕವಿಟ್ಟು ಭಗವಾನೆ ಕಾಳಕೂಟ್ಟಂ ಕುಡಿಪ್ಪಿಚ್ಚು
ಆರುಚೂಡುಂ ಭಗವಾಂಕಲ್ ಕೂರುಮಿಲ್ಲಾ ದೇವಗಳ್ಕ್ಕ
ನೂರುಕೂಟ್ಟಂಪರಞ್ಞೀಡಾ ಮಿಪ್ರಕಾರಂ ಕೈತವಂಗಳ್'

[ದಂದಶೂಕಾಧಿಪನಾದ ವಾಸುಕಿಯ ಹಗ್ಗಗೈದು
ಮಂದರಪರ್ವತವನ್ನು ಮಂತುಮಾಡಿ ಒಂದು ದಿನ
ಹಾಲುಗಡಲ ನಡುವೆ ಇಟ್ಟು ಕಡೆಯುತಿರುವಾಗ
ಬೇಗ ಕೆಲವಸ್ತುಗಳುದ್ಭವಿಸಿದುವದರಿಂದ
ಕಲ್ಪವೃಕ್ಷದೊರೆತುವು ಚಾರುಚೆಲುವ ನಾರಿಯರು
ನಾಲ್ಕು ಕೊಂಬಿನಾನೆಕೂಡ ಉದಿಸಿಬಂದುವಲ್ಲಿ
ಇಂಥ ಒಳ್ಳೆ ವಸ್ತುಗಳ ಬಾನಿನವರು ಬಾಚಿದರು
ಅವುಗಳೆಲ್ಲಾವುದನ್ನೂ ನಮ್ಮ ಜನಕ್ಕೆ ಕೊಡಲಿಲ್ಲ
ಶಿವನಿಗು ಅವುದನ್ನು ಕೊಡಲಿಲ್ಲವಷ್ಟೇ ಅಲ್ಲ
ಶಂಕೆಬಿಟ್ಟು ಶಿವನಿಗೆ ವಿಷವನ್ನು ಕುಡಿಸಿದರು
ಗಂಗಾಧರ ಶಿವನಲ್ಲಿ ಪ್ರೀತಿಯಿಲ್ಲ ಸುರರಿಗೆ
ನೂರರಷ್ಟು ಹೇಳಬಹುದವರ ಕೈತವಗಳ.]

ದೇವೇಂದ್ರನ ಅರಮನೆಯಲ್ಲಿ ಛತ್ರಚಾಮರಾದಿಗಳು ದಿಕ್ಕು ದೆಸೆಯಿಲ್ಲದೆ ಎಲ್ಲೆಲ್ಲಿಯೋ ಬಿದ್ದು ಕೊಳೆಯುತ್ತಿವೆ. ನಮ್ಮ ಶಿವನಿಗೆ ಅವುಗಳಲ್ಲಿ ಒಂದೆರಡನ್ನು ಕೊಟ್ಟಿದ್ದರೆ ಇಂದ್ರನಿಗೇನು ನಷ್ಟವಾಗುತ್ತಿತ್ತು ?

ಭಿಕ್ಷಾಟನೆಮಾಡಿದ ಕಪಾಲಿಗೆ ಏನನ್ನು ಕೊಟ್ಟರು ಆ ದೇವತೆಗಳು ? ಇಂದ್ರನಿಗೆ ಕಾಣಿಸಲಿಲ್ಲ ಎಂದು ಹೇಳುವುದು ಹೇಗೆ ? ಅವನಿಗಿರುವ ಕಣ್ಣುಗಳು ಒಂದೆ? ಎರಡೆ? ಸಾವಿರ ಕಣ್ಣುಗಳು! ನಮ್ಮ ಶಿವ ಅಸ್ಥಿಮಾಲೆಯನ್ನೇ ಮುತ್ತಿನ ಮಾಲೆ ಎಂದು ಭಾವಿಸಿ ಕೊರಳಿಗೆ ಹಾಕಿಕೊಂಡು ತಿರುಗುತ್ತಾನೆ.

‘ವಸ್ತ್ರಮಿಲ್ಲಾ ಞ್ಞಾಡನ್ ನಲ್ಲ ಪುಲಿತ್ತೋಲಜ್ಞಡುಕ್ಕುನ್ನು
ಚೆಂಬಕಪ್ಪೂಮಲರಿಲ್ಲಾ ಞ್ಞಾಂಬಿಳಿತ್ತೆಲ್ಲು ಚೂಡುನ್ನು
ಚಂದನಮಿಲ್ಲದು ಮೂಲಂವೆಣ್ಣನೀರ್‌ಗೊಂಡಣಿಯುನ್ನು
ಮೇಳ ಮೇಟ್ಟಂ ಕಲರ್ನ್ನೋರು ವಾಹನ ಮಿಲ್ಲದುಕೊಂಡು
ಕಾಳಕಂಠನ್ ಭಗವಾನುಂ ಕಾಳಯೇರಿ ನಡಕ್ಕುನ್ನು
ಆಳುಮಿಲ್ಲ ವಾಳುಮಿಲ್ಲ ಕಾಮವೈರಿಕ್ಕದುಮೂಲಂ
ಕಾಳಿಯೇಯುಂ ಕೂಳಿಯೇಯುಂ ತುಣಕ್ಕೊಂಡುನಡುಕ್ಕುನ್ನು
ಇಪ್ರಕಾರ ಮಿರಿಕ್ಕುನ್ನ ಸುಪ್ರಕಾಶಸ್ವರೂಪಿಕ್ಕಂ
ಗಪ್ರಿಯತ್ತೆವರುತ್ತುನ್ನ ದುಷ್ ಪ್ರಭುಗಳ್‌ಕ್ಕಿನ್ನು ತನ್ನೆ’
[ಉಡಲೊಳ್ಳೆ ವಸ್ತ್ರವಿಲ್ಲ ಹುಲಿಚರ್ಮಸುತ್ತುವನು
ಸಂಪಿಗೆಯ ಮುಡಿಯಲಿಲ್ಲ ಶಶಿಲೇಶ ಮುಡಿವನು
ಹಚ್ಚಿಕೊಳಲು ಗಂಧವಿಲ್ಲ ಬೂದಿಯನ್ನು ಬಳಿವನು
ಯೋಗ್ಯವಾದ ವಾಹನವು ಇಲ್ಲವದರಿಂದಲಾಗಿ
ಕಾಳಕಂಠ ಭಗವಂತ ಎತ್ತನೇರಿ ತಿರುಗುವನು
ಭಂಟರಿಲ್ಲ ಖಡ್ಗವಿಲ್ಲ ಕಾಮವೈರಿ ಅದರಿಂದ
ಕಾಳಿಮೂಳಿ ಜತೆಗೂಡಿ ತಿರುಗಾಡುತಿರುವನು
ಈ ಪ್ರಕಾರವಿರುವಂಥ ಸುಪ್ರಕಾಶ ಸ್ವರೂಪಿಗೆ
ಅಪ್ರಿಯವನ್ನೆಸಗಿದ ದುಷ್ಪ್ರಭುಗಳಿಗೀಗ]

ಇಂದೇ ಪೊರಟು ಅವರಿಗೆ ತಕ್ಕಪಾಠ ಕಲಿಸಬೇಕು.'' ಹೀಗೆ ಈ ಕಥೆ ಮುಂದುವರಿಯುತ್ತದೆ.

ರುಕ್ಮಿಣೀ ಸ್ವಯಂವರಂ

ಸಕಲ ಗುಣಪರಿಪೂರ್ಣರಾದವರು ಯಾರೂ ಇರಲಾರರು. ಒಂದಲ್ಲ ಒಂದು ದೋಷ ಇದ್ದೇ ಇರುತ್ತದೆ ಎನ್ನುವುದನ್ನು ನಂಬಿಯಾರರು 'ರುಕ್ಮಿಣೀ ಸ್ವಯಂವರಂ' ತುಳ್ಳಲ್ ಕಾವ್ಯದಲ್ಲಿ ವಿವರಿಸುವುದು ಹೀಗೆ:

'ಕುಟ್ಟಂಕೂಡಾದುಳ್ಳ ನರನ್ಮಾರ್
ಕುರಯುಂ ಭೂಮಿಯಿಲಿನ್ನು ಡೆತಾತ
ಲಕ್ಷಂ ಮಾನುಷರ್ ಕೂಡುಂಬೋಳತಿ
ಲಕ್ಷಣಮುಳ್ಳವರೊನ್ನೋರಂಡೋ
ಉಡಲತಿರಮ್ಯಮೊರುತ್ತನು ಕಾಲ್ಕೊರು
ಮುಡಮ್ಪುಂಡವನು ನಡಕ್ಕನ್ನೇರಂ
ನಲ್ಲೊರು ವಿದ್ವಾನವನುಡೆವಾಯಿಲ್
ಪಲ್ಲುಗಳೊನ್ನುಂ ಕಾಣ್ಮಾನಿಲ್ಲ
ಶಾಸ್ತ್ರಮಶೇಷಂ ವಶಮೊರು ಪುರುಷನು
ಗಾತ್ರಂ ಕಂಡಾಲಯ್ಯೋ ವಿಕೃತಂ
ಶ್ರೋತ್ರಂ ರಂಡು ಮೆಡಿಮೆಚ್ಚಲೊರು
ಮಾತ್ರಂ ಪ್ರೋಲುಂಕೇಳ್ಕಾನ್ ವಯ್ಯಾ
ಸತ್ಕೃತವಾರೆಯುರಿಞ್ಞೊರು ದೇಹಂ
ಕಕಕಕ ಕಂಸನ್ ಕಿಕಿಕಿಕಿ ಕೃಷ್ಣನ್
ಪಪಪ ಪೂತನಯೆನ್ನು ಕಥಯಿಲ್
ನಲ್ಲೊರು ಜಾತಿಯಿಲವನು ಪಿರನ್ನು

ನಲ್ಲೊರು ರೂಪಗುಣಂಗಳುಂ ಮುಂಡು
ಹರಿಯೆನ್ನಾದಿಯೊರಕ್ಷರಮವನುಡೆ
ಯರಿಗೇಕೂಡಿ ಪೋಯಿಟ್ಟಿಲ್ಲ.'
[ಭೂಮಿಯ ಮೇಲೆ ದೋಷಗಳಿಲ್ಲದ
ಮಾನವರಿರುವುದು ದುರ್ಲಭ ತಂದೆ
ಲಕ್ಷಮನುಷ್ಯರು ಇರುವೆಡೆಯಲ್ಲಿ
ಲಕ್ಷಣವುಳ್ಳವನೊಬ್ಬನೊ ಇಬ್ಬರೊ
ದೇಹವೊ ನೋಡಲು ಸುಂದರವಾತನು
ನಡೆದರೆ ತಿಳಿವುದು ಕುಂಟನು ಎಂದು
ಒಳ್ಳೆಯ ಪಂಡಿತ ಆವನ ಬಾಯೊಳಗೆ
ಹಲ್ಲುಗಳೊಂದೂ ಕಾಣುವುದಿಲ್ಲ.
ವಶಪಡಿಸಿರುವನು ಶಾಸ್ತ್ರವನ್ನೆಲ್ಲ
ದೇಹವ ನೋಡಿದರಯ್ಯೋ ವಿಕೃತ
ಗುಂಡಿನ ಶಬ್ದಕು ಕಿವಿಕೇಳಿಸದು
ಎಷ್ಟೋ ಸತ್ಯತೆಯರಿತವನೊಬ್ಬ
ಕಕಕಕ ಕಂಸ ಕಿಕಿಕಿಕಿ ಕೃಷ್ಣ
ಪುಪುಪು ಪೂತನಿ ಎನ್ನುವನವನು
ಹುಟ್ಟಿದುದೊಳ್ಳೆಯ ಜಾತಿಯಲೊಬ್ಬ
ಒಳ್ಳೆಯ ರೂಪೂ ಗುಣವೂ ಉಂಟು.'
ಹರಿಯೆನ್ನುವ ಎರಡಕ್ಷರವವನ
ಹತ್ತಿರ ಕೂಡ ಸುಳಿದಾಡಿಲ್ಲ.]

ಹೀಗೆ ಭೀಷ್ಮಕನ ಹತ್ತಿರ ರುಕ್ಮ, ಮಾನವರ ದೋಷಗಳನ್ನೆಲ್ಲ ವಿವರಿಸಿ, ಸಕಲಗುಣಪರಿಪೂರ್ಣರಾದವರು ದೊರೆಯುವುದು ದುರ್ಲಭ; ಆದರೆ ಶ್ರೀಕೃಷ್ಣ ಎಲ್ಲ ಗುಣಗಳಿಂದ ಕೂಡಿದವನು. ಅವನಿಗೆ ರುಕ್ಮಿಣಿಯನ್ನು ಮದುವೆಮಾಡಿಕೊಡಬಹುದು ಎಂದು ತಂದೆಗೆ ಸಲಹೆ ಕೊಡುತ್ತಾನೆ.

ಪುಳಿಂದೀ ಮೋಕ್ಷಂ

ಭಗವಂತ ಸರ್ವವ್ಯಾಪಿ; ವಿಶ್ವಾತ್ಮ. ಆತ್ಮಕ್ಕೆ ಮೇಲು-ಕೀಳು ಎನ್ನುವುದಿಲ್ಲ ಎನ್ನುವುದನ್ನು 'ಪುಳಿಂದೀ ಮೋಕ್ಷಂ' ತುಳ್ಳಲ್‌ನಲ್ಲಿ ನಂಬಿಯಾರರು ಪ್ರತಿಪಾದಿಸುವುದು :

'ಏವಮುಳ್ಳ ಶರೀರಂಗಳೊಕ್ಕವೇ ಪಾತ್ರಂಗಳಾಣೆಂಬೋಳ್
ಜೀವನಾಯಿಟ್ಟೊನ್ನು ತನ್ನೆ ಅಯುದಿಪ್ಪೋಳ್ ಪರಬ್ರಹ್ಮಂ
ನೂಲುಗೊಂಡು ಪಿರಿಚ್ಚೋರು ಚರಡಿಲ್ ಪೊನ್ಮಣಿಕೋರ್ತ್ತು
ಮಾಲಯಾಕ್ಕಿ ಧನಿಕ್ಕನ್ಮಾರ್ ಧರಿಕ್ಕುನ್ನಗಳಂತನ್ನಿಲ್
ಮುತ್ತುಗೊಂಡು
ಮಾಲಕೋರ್ಕ್ಕುಂ, ಪವಿಳಂಕೊಂಡುಮುಂಡಾಕ್ಕುಂ
ಪೂತ್ತಿಲಞ್ಞಿ ಕುರುಕೊಂಡುಂ ಕುನ್ನಿಗೊಂಡುದರಿದ್ರನ್ಮಾರ್
ಎನ್ನಪೋಲೆ ಸರ್ವಜಾತಿ ಪ್ರಭೂತ್ವಂ ಭೌತಿಕದೇಹಂ
ಒನ್ನುಗೊಂಡು ಕೋರ್ತ್ತುಕೆಟ್ಟಿಕ್ಕಳಿಪ್ಪಿಕ್ಕುನ್ನದುದೈವಂ
ಎನ್ನದುಮೂಲಮಾತ್ಮವಿನ್ನಾರ್ಕ್ಕುಂ ಮಾರ್ಕ್ಕುಂಭೇದಮಿಲ್ಲ
ಒನ್ನುತನ್ನೆ ಚರಡುಳ್ಳಿಲ್ ಭೂಸುರನ್ನುಂಪರಯನ್ನುಂ
ಜಗತ್ತಿಲುಳ್ಳ ವಸ್ತುಗಳೊಕ್ಕವೇ ಕಾರಣಭೂತನ್
ರಕ್ಷ ಶಿಕ್ಷಾ ಪ್ರಕ್ರಿಯೆಗಳ್ಕ್ಕೇಕನಾಥನ್'

ವಿಚಾರಮಾಡಿ ನೋಡಿದರೆ ಎಲ್ಲ ದೇಹಗಳಲ್ಲೂ ಸಂಚರಿಸಿಕೊಂಡಿರುವ ಜೀವ ಪರಬ್ರಹ್ಮನೊಬ್ಬನೇ. ಧನಿಕರು ಮುತ್ತನ್ನು ಪೋಣಿಸಿ ಮಾಲೆ ಮಾಡಿ ಕೊರಳಿಗೆ ಹಾಕಿಕೊಳ್ಳುತ್ತಾರೆ. ಹಾಗೆಯೇ ಧನವಂತರಲ್ಲದವರು, ಹವಳದ, ಗುರುಗುಂಜಿಯ, ಕರಿಮಣಿಯ ಮಾಲೆಗಳನ್ನು ಕೊರಳಿಗೆ ಹಾಕಿಕೊಳ್ಳುತ್ತಾರೆ. ಈ ಎಲ್ಲ ಮಾಲೆಗಳಿಗೂ ಹೇಗೆ ಸೂತ್ರ ಎನ್ನುವುದು ಇದ್ದೇ

ಇರುತ್ತದೋ ಹಾಗೆ ಎಲ್ಲ ಜೀವಿಗಳಲ್ಲೂ ಪರಬ್ರಹ್ಮನಿರುವು ದರಿಂದ ಎಲ್ಲರಲ್ಲಿರುವ ಆತ್ಮವೂ ಒಂದೇ. ಈ ಆತ್ಮಸೂತ್ರದಲ್ಲಿ ಪೋಣಿಸಿದ ಜೀವಿಗಳಲ್ಲಿ ಬ್ರಾಹ್ಮಣ, ಹೊಲೆಯ ಎನ್ನುವ ಭೇದವಿಲ್ಲ – ಎನ್ನುವ ವಿಚಾರಗಳು ನಂಬಿಯಾರರ ತುಳ್ಳಲ್ ಕಾವ್ಯಗಳುದ್ದಕ್ಕೂ ಕಂಡುಬರುತ್ತವೆ.

ಉಪಸಂಹಾರ

ಕುಂಜನ್ ನಂಬಿಯಾರರು ತಮಗಿಂತ ಹಿಂದಿನ ಸಂಸ್ಕೃತ, ಪ್ರಾಕೃತ ಹಾಗು ಮಲಯಾಳ ಕಾವ್ಯಗಳನ್ನೆಲ್ಲ ಆಳವಾಗಿ ಅಧ್ಯಯನ ಮಾಡಿದ್ದರು ಎನ್ನುವುದು ಅವರ 'ಧ್ರುವಚರಿತಂ' ತುಳ್ಳಲ್ ಕಥನಕಾವ್ಯದಿಂದ ತಿಳಿದುಬರುತ್ತದೆ. ಉತ್ತಾನ-ಪಾದರಾಯನ ಆಸ್ಥಾನಕ್ಕೆ ಬರುತ್ತಿದ್ದ ಗ್ರಂಥಗಳ ಒಂದು ಪಟ್ಟಿಯನ್ನು ಕೊಡುವುದರ ಮೂಲಕ ನಂಬಿಯಾರರು ತಾವು ಅಧ್ಯಯನ ಮಾಡಿದ ಗ್ರಂಥಗಳನ್ನು ತಿಳಿಸಿದ್ದಾರೆ. ಇದಲ್ಲದೆ ಕನ್ನಡ, ತಮಿಳು, ತೆಲುಗು ಭಾಷೆಗಳ ಪರಿಚಯವೂ ಈ ಕವಿಗಿತ್ತು ಎನ್ನುವುದಕ್ಕೆ ಕೆಲವು ತುಳ್ಳಲ್ ಕಥೆಗಳಲ್ಲಿ ಬರುವ ಕನ್ನಡ, ತಮಿಳು, ತೆಲುಗು ಭಾಷೆಗಳ ಕೆಲವು ಪಾದಗಳು ನಿದರ್ಶನಗಳಾಗಿವೆ.

ಮಲಯಾಳ ಸಾಹಿತ್ಯಕ್ಷೇತ್ರದಲ್ಲಿ 'ತುಳ್ಳಲ್ ಸಾಹಿತ್ಯ' ಎನ್ನುವ ವಿಶಿಷ್ಟ ಕಾವ್ಯಪ್ರಕಾರವನ್ನು ವಿಸ್ತೃತಗೊಳಿಸಿ, ಕೇರಳದ ಆದ್ಯಂತ ಅದನ್ನು ಪ್ರಚಾರಗೊಳಿಸಿದ ಕವಿ ಕುಂಜನ್ ನಂಬಿಯಾರ್. ಚಾಕ್ಯಾರರಿಂದ ಪರಿಹಾಸಕ್ಕೊಳಗಾದ ಕವಿ ನಂಬಿಯಾರರಿಂದ ಅರವತ್ತಕ್ಕೂ ಹೆಚ್ಚು ತುಳ್ಳಲ್ ಕಥೆಗಳು ಸೃಷ್ಟಿಗೊಂಡುವು. 'ಕುಂಜನ್ ನಂಬಿಯಾರರನ್ನು ಅರಿಯದ ಕೇರಳೀಯನಿಲ್ಲ'–ಎನ್ನುವ ಖ್ಯಾತಿಯನ್ನು ಪಡೆದ ನಂಬಿಯಾರರ ಜೀವನವೆಲ್ಲವೂ ಸಾಹಿತ್ಯಸೇವೆಗಾಗಿಯೇ ಮೀಸಲಾಯಿತು.

ಪಾಲಘಾಟ್ ಜಿಲ್ಲೆಯ ಹಳ್ಳಿಯೊಂದರಲ್ಲಿ ಜನ್ಮವೆತ್ತಿ ಚಂಬಕಶ್ಶೇರಿಯ ರಾಜನಾದ ದೇವನಾರಾಯಣನ ಪ್ರೀತಿಗೆ ಪಾತ್ರರಾಗಿ, ತಿರುವಾಂಕೂರು ಸಂಸ್ಥಾನದ ಮಾರ್ತಾಂಡವರ್ಮ ರಾಜರ ಆಸ್ಥಾನದಲ್ಲಿದ್ದು ಅವರ ಗೌರವಾದರಗಳನ್ನು ಪಡೆದು ಅನಂತರ ಕಾರ್ತಿಕ ತಿರುನಾಳ್ ಮಹಾರಾಜರ ಕೃಪಾಪೋಷಿತರಾಗಿ ಅರವತ್ತೈದು ವರ್ಷಗಳ ಜೀವಿತದಲ್ಲಿ ಕೇರಳದ ಅಸಾಮಾನ್ಯ ಕವಿಯೆನ್ನಿಸಿಕೊಂಡ ನಂಬಿಯಾರರು ತಮ್ಮ ಹುಟ್ಟಿದ ಊರನ್ನು ಸಂದರ್ಶಿಸಲು ತಿರುವನಂತಪುರದಿಂದ ಯಾತ್ರೆಯನ್ನು ಕೈಗೊಂಡಿದ್ದಾಗ ಹುಚ್ಚುನಾಯಿಯೊಂದು ಮೃತ್ಯುವಿನ ರೂಪದಲ್ಲಿ ಬಂದು ನಂಬಿಯಾರರ ಈ ಲೋಕದ ಯಾತ್ರೆಯನ್ನೇ ಅಂತ್ಯಗೊಳಿಸಿತಾದರೂ ಮಲಯಾಳ ಸಾಹಿತ್ಯಪ್ರಪಂಚದಲ್ಲಿ ನಂಬಿಯಾರರು ಶಾಶ್ವತವಾಗಿ ಉಳಿದಿದ್ದಾರೆ.

ಬೆಂಗಳೂರು ವಿಶ್ವವಿದ್ಯಾಲಯ ಮುದ್ರಣಾಲಯ